ಜಿ. ಎಮ್. ಪಾಟೀಲ

ಕನ್ನಡದಲ್ಲಿ ಕಾನೂನು



ಕನ್ನಡದಲ್ಲಿ ಕಾನೂನು

ಜಿ. ಎಮ್. ಪಾಟೀಲ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

KANNADALLI KANOONU - By : G. M. Patil, Published by The Director, Prasaranga, Kannada University, Hampi, Vidyaranya, Kamalapura - 583 221 First Impression 1997, Pp ii + 23, Rs. 2-00

ಮಂಟಪ ಮಾಲೆ ೨೮

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ ೫೮೩ ೨೨೧

ಬೆಲೆ ರೂ. ೨.೦೦

ಮುದ್ರಣ
ಮನು ಗ್ರಾಫಿಕ್ಸ
ಧಾರವಾಡ

೧. ಕನ್ನಡದಲ್ಲಿ ಕಾನೂನು ಏಕೆ ?

ಕನ್ನಡದಲ್ಲಿ ಕಾನೂನು ಏಕೆ ಎಂಬ ಪ್ರಶ್ನೆಗೆ ಉತ್ತರ ಕೊಡಬೇಕಾದರೆ ಕಾನೂನು ಯಾರಿಗಾಗಿ ಎಂಬ ಉಪಪ್ರಶ್ನೆ ಸಹಜವಾಗಿ ನಮ್ಮ ಮುಂದೆ ನಿಲ್ಲುತ್ತದೆ. ಕಾನೂನು ಇರುವುದು ಸಾರ್ವಜನಿಕರ ತಿಳುವಳಿಕೆಗಾಗಿ. ಈ ತಿಳುವಳಿಕೆಗೆ ಮೂಲ ಆಧಾರ ಭಾಷೆ. ಯಾವುದೇ ವಿಷಯ ಜನರಾಡುವ ಭಾಷೆಯಲ್ಲಿ ಇರದಿದ್ದರೆ ಅದು ಅವರಿಗೆ ತಿಳಿಯಲು ಸಾಧ್ಯವೇ ಇಲ್ಲ. ಕಾನೂನನ್ನು ಎಲ್ಲರೂ ತಿಳಿದಿರುವದಾಗಿ ಕಾನೂನಿನ ಮೂಲಭೂತ ತತ್ವ ಸಾರುತ್ತದೆ. ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಕಾನೂನು ತಿಳಿದಿರಲಿಲ್ಲವೆಂಬ ನೆಪವನ್ನೂ ಒಪ್ಪಲು ಸಾಧ್ಯವಿಲ್ಲವೆಂದು ಹೇಳಲಾಗುತ್ತಿದೆ. ಅಂದರೆ Every person is presumed to know the Law of his land ಎಂಬ ಮಾತಾಗಲೀ ಅಥವಾ Ignorance of law is no excuse ಎಂಬ ಮಾತನ್ನು ನಾವು ಗಮನಿಸಿದಾಗ ಜನರಿಗೆ ಅರ್ಥವಾಗದ ಭಾಷೆಯಲ್ಲಿ ಕಾನೂನು ಇದ್ದರೆ ಅದು ಯಾವ ಜನರಿಗೆ ಪ್ರೀತಿಯಾದೀತು !

ಕರ್ನಾಟಕದಲ್ಲಿ ಜನರಾಡುವ ಭಾಷೆಯೆಂದರೆ ಯಾವುದು ಎಂಬ ಪ್ರಶ್ನೆಗೆ ಉತ್ತರ ಜನರಾಡುವ ಭಾಷೆಯೇ ಕರ್ನಾಟಕದ ಭಾಷೆ. ಅಂದರೆ ಕನ್ನಡವೆಂದಾಗುತ್ತದೆ. ಪ್ರತಿಶತ : ಅರವತ್ತಾರಕ್ಕಿಂತ ಹೆಚ್ಚಿಗೆ ಜನರ ಮಾತೃ ಭಾಷೆ ಕನ್ನಡ. ಇನ್ನುಳಿದ ಪ್ರತಿಶತ : ಮೂವತ್ತುನಾಲ್ಕು ಜನರ ಮಾತೃಭಾಷೆ ಕನ್ನಡವಾಗಿರದಿದ್ದರೂ ಅವರಲ್ಲಿ ಬಹುಶಃ ಎಲ್ಲರಿಗೂ ಕನ್ನಡ ಭಾಷೆಯ ಅರ್ಥ ವ್ಯವಹಾರದ ಮಟ್ಟಿಗಾದರೂ ಆಗುತ್ತದೆ. ಈ ಮಾತನ್ನು ಗಮನಿಸಿಯೇ ಕನ್ನಡನೆಲದ ಭಾಷೆ ಕನ್ನಡವೆಂದು ಪರಿಗಣಿತವಾಗಿದೆ.

ಮೇಲೆ ವಿವರಿಸಿದಂತೆ ಪ್ರತಿಯೊಬ್ಬರೂ ಕಾಯಿದೆಯನ್ನು ತಿಳಿದಿದ್ದಾರೆ ಎಂದು ಗ್ರಹಿಸಿದರೆ, ಅಂಥ ತಿಳುವಳಿಕೆಯ ಸಾಧನವಾದ ಕನ್ನಡದಲ್ಲಿಯೇ ಕಾನೂನು ಇರಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಬೇಕಾಗಿಲ್ಲ. ಅಲ್ಲದೆ ಹಿಂದೆ ಧರ್ಮಶಾಸ್ತ್ರದ ಪ್ರಕಾರ ವಿಜೇತರಾದ ರಾಜರೂ ಕೂಡ ತಾವು ಗೆದ್ದನಾಡಿನ ಜನತೆಯ ಆಚಾರ - ವಿಚಾರಗಳಿಗೆ ಮನ್ನಣೆ ಕೊಡಬೇಕಾಗಿತ್ತು. ನೆಲದ ಭಾಷೆಯನ್ನೂ ಕೂಡಾ ಮನ್ನಿಸಬೇಕಾದುದು ಹೀಗೆ ಅವಶ್ಯ ಎಂದಾಯಿತು.

ಸ್ಥೂಲವಾಗಿ ವಿಚಾರಿಸಿದರೆ ಕಾನೂನಿನ ಉಗಮವನ್ನು ಎರಡು ರೀತಿಯಿಂದ ಗುರುತಿಸಬಹುದು. ಮೊದಲನೆಯದಾಗಿ, ಪರಮಾವಧಿಕಾರವನ್ನು ಹೊಂದಿರುವ ವ್ಯಕ್ತಿ ಅಥವಾ ಗುಂಪು ನಾಡಿಗರು ಅನುಸರಿಸಬೇಕಾದ ಕಟ್ಟಳೆಗಳನ್ನು ಮೇಲಿನಿಂದ ಅವರ ಮೇಲೆ ಹೇರುವದು.

ಇಲ್ಲಿ ಅಂಥ ಪರಮಾಧಿಕಾರವುಳ್ಳ ವ್ಯಕ್ತಿ ಅಥವಾ ಗುಂಪಿನ ಇಚ್ಛೆಗೆ ಪ್ರಾಧಾನ್ಯ ಬರುವದರಿಂದ ಅವರು ವ್ಯಕ್ತ ಮಾಡುವ ಭಾಷೆ ಜನರ ಭಾಷೆ ಆಗಿರದೇ ಇರಬಹುದು. ಒಂದು ಕಾಲದಲ್ಲಿ ಸಂಸ್ಕೃತ ದೇವಭಾಷೆಯೆಂದು ಪರಿಗಣಿತವಾಗಿತ್ತು. ಅಲ್ಲದೆ ಅದು ರಾಜರ, ರಾಜ ಪ್ರತಿನಿಧಿಗಳ ಭಾಷೆ ಆಗಿತ್ತು. ಹೀಗಾಗಿ ಕಾನೂನಿಗೆ ಸಂಬಂಧ ಪಟ್ಟ ವಿಷಯಗಳೆಲ್ಲವೂ ಸಂಸ್ಕೃತದಲ್ಲಿಯೇ ಇರುವುದನ್ನು ಕಾಣುತ್ತೇವೆ. ಕರ್ನಾಟಕವೂ ಈ ಮಾತಿಗೆ ಅಪವಾದವಾಗಿಲ್ಲ. ಈ ನೆಲದಲ್ಲಿ ಆಳಿದ ಅನೇಕ ರಾಜರ ಕಾನೂನು - ಆಡಳಿತ ಭಾಷೆಯಾಗಿದ್ದ ಸಂಸ್ಕೃತದಲ್ಲಿರುವುದನ್ನು ಕಾಣುತ್ತೇವೆ. ಆದರೆ ಈಗ ನಮ್ಮನ್ನಾಳುವವರ ಭಾಷೆ ಸಂಸ್ಕೃತವಲ್ಲ, ಕನ್ನಡ. ಆದುದರಿಂದ ಈ ನಾಡಿನಲ್ಲೀಗ ಕನ್ನಡದಲ್ಲಿ ಕಾನೂನು ಇರಬೇಕೆಂಬ ಬಗ್ಗೆ ಎರಡು ಮಾತಿಲ್ಲ. ಆದರೆ ಅದರಲ್ಲಿ ಅಡಚಣೆಗಳಿರಬಹುದು.

ಕಾನೂನು ಜೀವನದ ಅವಿಭಾಜ್ಯ ಅಂಗವಾಗಿದೆ. ಆಸ್ತಿ ಉಳ್ಳವರೇ ಕಾನೂನು ತಿಳಿದಿರಬೇಕೆಂದಿಲ್ಲ. ಔದ್ಯೋಗಿಕ ಕ್ರಾಂತಿಯ ನಂತರ ಪ್ರತಿಯೊಂದು ನಾಡು ತನ್ನ ಕಾರ್ಯವಾಪ್ತಿಯನ್ನು ವಿಸ್ತರಿಸಿಕೊಂಡಿದೆ. ನಾವಿಂದು ಪೋಲೀಸ ರಾಜ್ಯದ ಕಲ್ಪನೆಯನ್ನು ದಾಟಿ, ಸಮಾಜವಾದದ ಯುಗದಲ್ಲಿದ್ದೇವೆ. ಹೀಗಾಗಿ ಕಾಯಿದೆಯ ಕ್ಷೇತ್ರ ಇಂದು ವಿಸ್ತಾರಗೊಂಡಿದೆ. ಸಣ್ಣ ಉದಾಹರಣೆ ಕೊಡಬೇಕೆಂದರೆ. ನಿಮ್ಮ ಮನೆಯಲ್ಲಿ ನೀವು ಎಷ್ಟು ಸಕ್ಕರೆ, ಚಿಮಣಿ ಎಣ್ಣೆ, ಬಂಗಾರ ಧಾನ್ಯಗಳನ್ನು ಇಟ್ಟುಕೊಳ್ಳಬೇಕೆಂಬ ಬಗೆಗೆ ಕೂಡ ಕಾಯಿದೆ ಇದೆ. ಇದು ವೈಯಕ್ತಿಕ ವಿಷಯವಾಗಿ ಇಂದು ಉಳಿದಿಲ್ಲ. ಸಮಾಜದ ಎಲ್ಲ ಸ್ತರಗಳಲ್ಲಿ ಹಾಸು ಹೊಕ್ಕಾಗಿದೆ.

ಇನ್ನೊಂದು ರೀತಿಯಿಂದ ಕನ್ನಡದಲ್ಲಿ ಕಾನೂನು ಏಕೆ ಎಂಬ ಬಗೆಗೆ ವಿಚಾರಿಸೋಣ. ನಾವು ಪೇಟೆಗೆ ಹೋದರೆ ನಮಗೆ ತಿಳಿಯದ ಭಾಷೆಯಲ್ಲಿ ನಾವು ಕೊಂಡುಕೊಳ್ಳಲು ಇಚ್ಛಿಸುವ ವಸ್ತುವಿನ ಬೆಲೆಯನ್ನು ಹೇಳಿದರೆ ಕೊಂಡುಕೊಳ್ಳುತ್ತೇವೆಯೋ ? ಇಲ್ಲ. ನಮಗೆ ತಿಳಿಯದ ಭಾಷೆಯಲ್ಲಿ ಅಂಗಡಿಕಾರ ವ್ಯವಹರಿಸಿದರೆ ನಾವು ಅಲ್ಲಿ ವ್ಯಾಪಾರ ಮಾಡುವದಿಲ್ಲ. ಆದರೆ ಕಾನೂನು ಕ್ಷೇತ್ರದಲ್ಲಿ ಮಾತ್ರ ಇಂಥ ವ್ಯವಹಾರ ಸಾಧ್ಯವಾಗಿರುವದು ಆಶ್ಚರ್ಯದ ಮಾತು. ಕೇವಲ ಜನಸಂಖ್ಯೆಯ ಮೂರರಷ್ಟು ಮಾತ್ರ ಜನರು ಆಂಗ್ಲ ಭಾಷೆಯನ್ನು ತಿಳಿದಿದ್ದಾರೆ. ಹಾಗಿದ್ದಲ್ಲಿ ನೂರಕ್ಕೆ ತೊಂಬತ್ತೇಳರಷ್ಟಿರುವ ಜನರಿಗೆ ತಿಳಿಯದ ಭಾಷೆಯಲ್ಲಿ ಕಾಯಿದೆಯ ವ್ಯವಹಾರ ನಡೆದರೆ ಅದು ಯಾವ ದೇವರಿಗೆ ಪ್ರಿಯವಾದೀತು. ?

ನ್ಯಾಯಾಲಯಗಳಾಗಿರುವುದು, ಕಾಯಿದೆಯಿರುವುದು ಜನರ ಅನುಕೂಲಕ್ಕಾಗಿ. ಕಕ್ಷಿದಾರನಿಗೆ ತಿಳಿಯದ ಭಾಷೆಯಲ್ಲಿ ಅವನ ವ್ಯಾಜ್ಯ ನಡೆದರೆ ಇದು ನ್ಯಾಯಸಮ್ಮತವೇ? ಒಬ್ಬ ಕಕ್ಷಿದಾರನಿಗೆ ತಿಳಿಯದ ಭಾಷೆಯಲ್ಲಿ ಒಂದು ವ್ಯಾಜ್ಯದಲ್ಲಿ ಅವನ ವಕೀಲರು ಒಮ್ಮೆ ವಾದಮಾಡುತ್ತಿದ್ದರಂತೆ. ಅವರ ವಾದದಲ್ಲೇನೂ ಹುರುಳಿರಲಿಲ್ಲ. ಆದರೆ ವಕೀಲರು ಮಾತ್ರ ಜೋರಾಗಿ ಮೇಜು ಗುದ್ದಿ ಗುದ್ದಿ ಪಕ್ಷಕಾರನ ಕಡೆಗೊಮ್ಮೆ, ನ್ಯಾಯಾಧೀಶರ ಕಡೆಗೊಮ್ಮೆ ನೋಡುತ್ತಾ ವಾದ ಮಾಡುವದನ್ನು ನೋಡಿ ನ್ಯಾಯಾಧೀಶರಿಗೆ ಮೋಜೆನಿಸಿತು. ಯಾವ ತಿರುಳೂ

ಇಲ್ಲದ ಖಟ್ಲೆಯಲ್ಲಿ ಇವರೇಕೆ ತಾರಕಸ್ವರದಲ್ಲಿ ವಾದಮಾಡುತ್ತಾರೆಂಬುಂದು ತಿಳಿಯದೆ ನ್ಯಾಯಾಧೀಶರು ಇಂಗ್ಲೀಷಿನಲ್ಲಿ "ಏನು ವಕೀಲರೇ, ಏನೂ ಜೀವವಿಲ್ಲದ ಈ ಖಟ್ಲೆಯಲ್ಲಿ ಏಕೆ ಇಷ್ಟೊಂದು ಜೋರಾಗಿ ಕೂಗಾಡುತ್ತಿದ್ದೀರಿ ? ಇದರಿಂದ ನಿಮ್ಮ ಸಮಯವೂ ಹಾಳು, ನನ್ನ ಸಮಯವೂ ಹಾಳು. ದಯವಿಟ್ಟು ಮುಗಿಸಿಬಿಡಿ" ಎಂದಾಗ ಆ ಚಾಣಾಕ್ಷ ವಕೀಲರು ಇಂಗ್ಲೀಷಿನಲ್ಲಿ "ಮಾನ್ಯರೆ, ಈ ಖಟ್ಲೆಯಲ್ಲಿ ಏನೂ ಹುರುಳಿಲ್ಲವೆಂದು ನನಗೂ ಗೊತ್ತಿದೆ. ಆದರೆ ನಾನು ಮಾಡುತ್ತಿರುವ ವಾದ ತಮಗಾಗಿ ಅಲ್ಲ. ಇಲ್ಲಿ ನನ್ನನ್ನೇ ನೊಡುತ್ತಾ ನಮ್ಮ ಪಕ್ಷಗಾರ ಕೂತಿರುವನಲ್ಲಾ ಅವನಿಗೆ. ನಾನು ಎಷ್ಟು ಜೋರಾಗಿ ವಾದ ಮಾಡಿದರೆಂಬುದು ಅವನಿಗೆ ತಿಳಿದರೆ ಸಾಕು. ಅವನು ನನಗೆ ಹಣ ಕೊಡುತ್ತಾನೆ. ಅವನಿಗೆ ಸಮಾಧಾನವಾದರೆ ಸಾಕು." ಎಂದು ಹೇಳಿದರಂತೆ. ಇಂತಹ ಉದಾಹರಣೆಗಳನ್ನು ನಾನು ಅನೇಕ ಸಲ ನ್ಯಾಯಾಲಯದಲ್ಲಿ ಕಂಡಿದ್ದೇನೆ. ಬುದ್ಧಿಬಲವನ್ನು ಬದಿಗಿಟ್ಟು ಕಂಠತ್ರಾಣವನ್ನೇ ಬಂಡವಾಲು ಮಾಡಿಕೊಂಡು ವಾದ ಮಾಡುವ ವಕೀಲರನ್ನೂ ಕಾಣುತ್ತೇವೆ. ಆದರೆ ಅವರ ವಾದ ಆಂಗ್ಲ ಭಾಷೆಯಲ್ಲಿ ಇರುವದರಿಂದ ಅವರಿಗೆ ಹಣ ಕೊಡುವ ಕಕ್ಷಿದಾರನಿಗೆ ಏನೊಂದೂ ತಿಳಿಯದೆ ವಕೀಲರ ಹಾವ-ಭಾವ ಅವರ ಜೋರಾದ ಧ್ವನಿಯನ್ನೇ ನಂಬಿಕೊಂಡು ಅವನು ತೃಪ್ತಿಪಡಬೇಕು. ಆ ವಕೀಲರು ನ್ಯಾಯಾಲಯದ ಹೊರಗೆ ಬಂದು ತಮ್ಮ ಪಕ್ಷಗಾರನಿಗೆ, "ನ್ಯಾಯಾಧೀಶರಿಗೆ ಏನೂ ತಿಳಿಯುತ್ತಿರಲಿಲ್ಲ ಅದಕ್ಕೇ ನಡುವೆ ಅಡ್ಡ ಬಾಯಿ ಹಾಕುತ್ತಿದ್ದರು. ನೋಡು, ಅವರಿಗೆ ಹೇಗೆ ದಬಾಯಿಸಿದೆ." ಅಂತಾ ಬಡಾಯಿ ಕೊಚ್ಚಿಕೊಳ್ಳುತ್ತಿರುವಾಗ ಕುಮಾರವ್ಯಾಸನ ಉತ್ತರನ ಪೌರುಷದ ಮಾತುಗಳು ನೆನಪಿಗೆ ಬಂದವು. ಏನೆಂದರೆ "ಬಾಯ್ಗೆ ಬಂದುದ ಗಳಹುತಿರ್ದನು ಬೇಕು-ಬೇಡೆಂದವರ ನಾ ಕಾಣೆ." ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಕಳೆದರೂ ಇನ್ನೂ ಕತ್ತಲೆಯಲ್ಲಿಯೇ ನಾವು ಸಾಗುತ್ತಿದ್ದೇವೆ.

ಕನ್ನಡದಲ್ಲಿ ಕಾನೂನನ್ನು ಸರಿಯಾಗಿ ವಿವರಿಸಬಹುದೇ ಎಂಬ ಶಂಕೆ ಇನ್ನೂ ಕೆಲವರನ್ನು ಕಾಡುತ್ತಲಿದೆ. ಅಂಗ್ಲರಿಗೂ ತಮ್ಮ ಭಾಷೆಯ ಬಗೆಗೆ ಇಂಥ ಸಂದೇಹ ಮೊದ ಮೊದಲಿಗೆ ಕಾಡಿರುವದನ್ನು ನಾವು ಕಾಣುತ್ತೇವೆ. ಮಹಾ ಮೇಧಾವಿಯೆನಿಸಿದ್ದ ಜೀಕನ್ನನು ಕೂಡ ತನ್ನ ಆಂಗ್ಲ ಭಾಷಾ ಪ್ರಾವೀಣ್ಯಕ್ಕಿಂತ ತನ್ನ ಲ್ಯಾಟಿನ್ ಭಾಷೆಯ ಪ್ರಭುತ್ವದ ಬಗ್ಗೆ ಹೆಮ್ಮೆ ಇರಿಸಿಕೊಂಡಿದ್ದ. ಅವನ ಮತದಂತೆ ಇಂಗ್ಲೀಷ ಭಾಷೆ ಬಂದಿಲ್ಲೊಂದು ದಿನ ದಿವಾಳಿ ತೆಗೆಯುವ ಭಾಷೆ ಆಗಿದ್ದಿತು. ಆದರೆ ಜೀಕನ್ನನ ಕೀರ್ತಿ ಅವನ ಲ್ಯಾಟಿನ್ ಬರಹಗಳಿಗಿಂತ ಆಂಗ್ಲ ಭಾಷೆಯಲ್ಲಿರುವ ಅವನ ನಿಬಂಧನೆಗಳ ಮೇಲೆ ಇಂದು ನಿಂತಿದೆ. ಸ್ವತಃ ಇಂಗ್ಲಂಡದಲ್ಲಿಯೇ ನ್ಯಾಯಾಲಯಾದಿಗಳ ತೀರ್ಮಾನಗಳನ್ನು ಇಂಗ್ಲೀಷನಲ್ಲಿ ಬರೆಯಹತ್ತಿದ್ದೂ ಎಷ್ಟೋ ಕಾಲ ನಂತರ. ಇದಕ್ಕೂ ಮೊದಲಿನ ತೀರ್ಪುಗಳು ಲ್ಯಾಟಿನ್ ಭಾಷೆಯಲ್ಲಿರುತ್ತಿದ್ದವು. ಕಾರಣ, ಪ್ರಾದೇಶಿಕ ಭಾಷೆಯಲ್ಲಿ ಕಾನೂನು ಬಳಕೆಯ ಬಗೆಗೆ ಇಂಥ ಶಂಕೆ ಇರುವದು ಸಹಜ. ಆದರೆ ಎರಡು ಸಾವಿರ ವರುಷ ಇತಿಹಾಸ ವಿರುವ ಕನ್ನಡದಂತಹ ಶ್ರೀಮಂತ ಭಾಷೆಯಲ್ಲಿ ಕಾನೂನನ್ನು ಸಮರ್ಥವಾಗಿ ಬಳಸಬಹುದಾದ ಸಾಧ್ಯತೆಯ ಬಗೆಗೆ ಯಾರಿಗೂ ಸಂಶಯ ಬೇಡ.

ಕಾಯಿದೆ ಇರುವದು ನಮಗಾಗಿ - ನಿಮಗಾಗಿ. ಆಳುವವರಿಗೂ ಆಳಲ್ಪಡುವವರಿಗೂ ಸಮನಾಗಿಯೇ ಈ ಕಾಯಿದೆ ಇವೆ. ಕಾರಣ, ಇವು ಆ ನಾಡಿನ ಜನರಿಗೆ ತಿಳಿಯುವಂತಿರಬೇಕೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಪೂರ್ವ ಚರಿತ್ರೆಯನ್ನು ನೋಡಿದರೆ ಇದು ವಿಪರೀತವಾಗಿರುವಂತೆ ಕಾಣುತ್ತಿದೆ. ಕರ್ನಾಟಕದಲ್ಲಿ ಆಳರಸರ ಮನೆ ಮಾತು ಕನ್ನಡ, ಪ್ರಜೆಗಳ ಮನೆ ಮಾತು ಕನ್ನಡ. ಆದರೆ ನ್ಯಾಯ ನಿರ್ಣಯದ ವಿಷಯದಲ್ಲಿ ಸಂಸ್ಕೃತದ ಪ್ರಾಧಾನ್ಯತೆ ಮೆರೆದಿರುವದು ಕಾಣುತ್ತದೆ. ರಾಜನೇ ನ್ಯಾಯ ನಿರ್ಣಯದ ಪರಮಾಧಿಕಾರ ಹೊಂದಿದ್ದರೂ ಆಗ ವೇದಪಾರಂಗತರು, ನ್ಯಾಯ ನಿರ್ಣಾಯಕರಾಗಿ ಕಾರ್ಯನಿರ್ವಹಿಸುತ್ತಿದುದನ್ನು ಕಾಣುತ್ತೇವೆ. ಒಂದು ವೇಳೆ ಇಂಥ ವೇದಪಾರಂಗತನು ದೊರೆಯದೆ ಹೋದಲ್ಲಿ ನ್ಯಾಯಶಾಸ್ತ್ರ ಅಭ್ಯಾಸದ ವೈಶ್ಯನಾಗಲೀ ಅಥವಾ ಕ್ಷತ್ರಿಯನಾಗಲೀ ನ್ಯಾಯಾಧೀಶರಾಗಬಹುದಿತ್ತು. ಆದರೆ ಇಂಥ ಅಧಿಕಾರ ಶೂದ್ರರಿಗೆ ಎಂದೂ ಬರತಕ್ಕದ್ದಲ್ಲವೆಂಬ ಅಂದಿನ ಕಟ್ಟಳೆ ಇಂದು ವಿಚಿತ್ರವೆನಿಸುತ್ತದೆ. ಚಾಲುಕ್ಯ ಚಕ್ರವರ್ತಿಗಳ ಕಾಲದಲ್ಲಿ ಪ್ರಚಲಿತವಿದ್ದ ಇಂಥ ನ್ಯಾಯವ್ಯವಸ್ಥೆ ಇದ್ದ ಬಗ್ಗೆ ಡಾ. ಕೆ.ಆರ್.ಬಸವರಾಜ ಅವರ ಸಂಶೋಧಕ ಪ್ರಬಂಧ "ಚಾಲುಕ್ಯರ ಕಾಲದ ಆಡಳಿತ" ದಲ್ಲಿ ನೋಡುತ್ತೇವೆ. ಈ ನ್ಯಾಯಾಧೀಶರಿಗೆ ಸಲಹೆ ನೀಡುವ ಸಲಹಾ ಮಂಡಳಿಯವರಿಗೆ ಇರಬೇಕಾದ ಅರ್ಹತೆಗಳೂ ಗಂಭೀರವಾಗಿಯೇ ಇವೆ. ಈ ವಿಷಯದಲ್ಲಿ "ಮಾನಸೋಲ್ಲಾಸ" ಗ್ರಂಥ ಪ್ರಮಾಣಿತ ಆಡಳಿತ ವಿವೇಚನೆಯ ಗ್ರಂಥವಾಗಿದ್ದು. ಅದು ಸಂಸ್ಕೃತದಲ್ಲಿರುವದನ್ನು ಕಾಣುತ್ತೇವೆ.

ಇವುಗಳ ಜೊತೆಗೆ ಚಾಲುಕ್ಯರ ಕಾಲದಲ್ಲಿಯ ನ್ಯಾಯ ನಿರ್ಣಯ ಪದ್ದತಿಕೂಡ ಇಂದು ಅನುಕರಣ ಯೊಗ್ಯವಾಗಿದೆ. ಕೇವಲ ಯೋಗ್ಯವಾದ ಮೊಕದ್ದಮೆಗಳು ಮಾತ್ರ ಕೊನೆಯ ತೀರ್ಪಿಗಾಗಿ ವಿಚಾರಣೆಗೆ ಒಳಪಡುವ ಪದ್ದತಿಯನ್ನು ನೋಡಿದರೆ, ಇದರಲ್ಲಿ ವಾದಿಯ ಹೇಳಿಕೆ, ಪ್ರತಿವಾದಿಯ ಹೇಳಿಕೆ, ಆರೋಪಿಯ ಹೇಳಿಕೆ ಕನ್ನಡದಲ್ಲಿಯೇ ಇರಲಿಕ್ಕೆ ಬೇಕು. ನ್ಯಾಯಾಧೀಶರು ಮಾತ್ರ ಸಂಸ್ಕೃತ ಮತ್ತು ಕನ್ನಡ ಎರಡರಲ್ಲೂ ಪರಿಣತರಿದ್ದುದಾಗಿ ಕಂಡು ಬರುತ್ತದೆ.

ಹಿಂದಿನ ಕಾಲದ ನ್ಯಾಯಪದ್ದತಿಯ ಬಗೆಗೆ ಹೆಚ್ಚಾಗಿ ಶಿಲಾಶಾಸನದಲ್ಲಿ ಬರುವ ವಿಷಯಗಳು, ಅಲ್ಲದೆ ಪ್ರಸಿದ್ದ ಕನ್ನಡ ಕಾವ್ಯದಲ್ಲಿ ಬರುವ ವಿಷಯಗಳು ಮನನ ಯೋಗ್ಯವಾಗಿವೆ. ರಾಜರ ಭಾಷೆ ಏನೇ ಇರಲಿ ಸಾಮಾನ್ಯ ಕಾಯಿದೆ ಜ್ಞಾನ ಕನ್ನಡದಲ್ಲಿಯೇ ಇರುವದನ್ನು ಊಹಿಸಬಹುದು. ಉದಾಹರಣೆಗೆ, ಒಡಂಬಡಿಕೆ ಕಾಯಿದೆ (Law of Contract) ಬಗೆಗೆ ಕುಮಾರವ್ಯಾಸನ ಭಾರತದಲ್ಲಿ ಬರುವ ಕಾಯಿದೆಯ ಮೂಲಭೂತ ತತ್ವಗಳು ಗಮನಾರ್ಹವಾಗಿವೆ. ಇಬ್ಬರು ವ್ಯಕ್ತಿಗಳು ಯಾವುದಾದರೊಂದು ವ್ಯವಹಾರ ಮಾಡಬೇಕಿದ್ದರೆ, ಅವರಿಗೆ ಅಂಥ ಹಕ್ಕು ಇರಬೇಕು. ಅಲ್ಲದೆ ಅವರು ಯಾವವಿಷಯದಲ್ಲಿ ವ್ಯವಹರಿಸುತ್ತಾರೋ ಅದರ ಬಗ್ಗೆ ಸಂಪೂರ್ಣ ಅಧಿಕಾರ ಹೊಂದಿರಬೇಕು. ಮೂರನೆಯದಾಗಿ, ಅವರು ಅಂಥ ವ್ಯವಹಾರ ಕುದುರಿಸಲು ಸ್ವತಂತ್ರರಾಗಿರಬೇಕು. ಆಗಿನ ಕಾಲದ ವ್ಯವಸ್ಥೆಯ ಪ್ರಕಾರ, ಗುಲಾಮನು ಸ್ವತಂತ್ರ ವ್ಯಕ್ತಿಯನ್ನು

ಪಣಕ್ಕೊಡ್ಡಲಾರ. ಅಲ್ಲದೆ ಪಣಕ್ಕೊಡ್ಡುವ ಧನ, ಅವನ ಸಂಪೂರ್ಣ ಮಾಲಕಿಯದಿರಬೇಕು. ಈ ಎಲ್ಲ ಕಾಯಿದೆ ಅಂಶಗಳನ್ನು ಲಕ್ಷದಲ್ಲಿಟ್ಟುಕೊಂಡೇ ದ್ರೌಪದಿಯು ನ್ಯಾಯವಿಶಾರದರಾದ ದ್ರೋಣ, ಭೀಷ್ಮ, ಕೃಪ, ಧೃತರಾಷ್ಟ್ರ ಅಲ್ಲದೇಇನ್ನುಳಿದ ಕುರುವೀರರಿಗೆ, ಹಾಗೂ ಅವರ ಆಶ್ರಿತರಿಗೆ ಪ್ರಶ್ನಿಸುತ್ತಾಳೆ. ಏನೆಂದರೆ "ಧರ್ಮರಾಜನು ತನ್ನನ್ನು ತಾನೇ ಮೊದಲು ಸೋತನಂತರ, ನನ್ನನ್ನು ಪಣಕ್ಕೆ ಹಚ್ಚಲಾರ. ಕಾರಣ ಇಂಥ ವ್ಯವಹಾರ ಕಾನೂನಿನ ದೃಷ್ಟಿಯಲ್ಲಿ ಊರ್ಜಿತವಾಗಲಾರದು. ಅದರಂತೆ, ದ್ರೌಪತಿ ಐದು ಜನರ ಸ್ವತ್ತು. ಧರ್ಮರಾಜನಿಗೊಬ್ಬನಿಗೇ ದ್ರೌಪದಿಯನ್ನು ಪಣಕ್ಕಿಡುವ ಹಕ್ಕಿಲ್ಲ. ಅಂದರೆ ಅವಳ ಮೇಲೆ ಸಂಪೂರ್ಣ ಅವನೊಬ್ಬನಿಗೆ ಹಕ್ಕಿಲ್ಲ. ಅಲ್ಲದೆ ದ್ರೌಪದಿಗಿಂತ ಮೊದಲಿಗೆ ಎಲ್ಲರನ್ನು ಪಣಕ್ಕಿಟ್ಟಿದ್ದರಿಂದ ಅವರೆಲ್ಲರೂ ದಾಸರಾಗಿದ್ದಾರೆ. ಕಾರಣ ಯಾವುದೇ ಸಂದರ್ಭದಲ್ಲಿ ದ್ರೌಪತಿಯು ಪಣದ ವಸ್ತುವಾಗಿರಲಾರಳು. ಇಲ್ಲಿ ಬಹಳೇ ಅರ್ಥವುಳ್ಳ ಒಂಡಬಡಿಕೆಯ (Law of Contract) ಕೆಲವೊಂದು ಮೂಲಭೂತ ದಿವಾನಿ ಸ್ವರೂಪದ ತತ್ವಗಳು ಚಿಂತಿವಾಗಿವೆ.

ಅಂಥದೇ ಇನ್ನೊಂದು ಪ್ರಸಂಗ. ಫೌಜಧಾರಿ ಸ್ವರೂಪದ ಕಾಯಿದೆ ಅಂದರೆ "ತಪ್ಪೊಪ್ಪಿಗೆ"ಯ ತತ್ವಗಳನ್ನು ಕುಮಾರವ್ಯಾಸ ಕರ್ನಾಟ ಭಾರತ ಕಥಾಮಂಜರಿಯಲ್ಲಿ ಚಿತ್ರಿಸಿರುವದು ವಿಚಾರಣೀಯವಾಗಿದೆ.

ಇಲ್ಲಿ ತಪ್ಪೊಪ್ಪಿಗೆಯು (Law of Confession) ಫೌಜಧಾರಿ ಕಾಯಿದೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ತಪ್ಪು ಮಾಡುವದು ಮಾನವನ ಸ್ವಭಾವ. ಆದರೆ ಮಾಡಿದ ತಪ್ಪನ್ನು ಒಪ್ಪಿಕೊಳ್ಳುವದು ಮಾನವ ಧರ್ಮ. ಇದು ಎಲ್ಲ ಜನಾಂಗದಲ್ಲಿಯೂ ಕಂಡು ಬರುತ್ತದೆ. ಕ್ರಿಶ್ಚನ್ ಜನಾಂಗದಲ್ಲಿಯೂ ತಪ್ಪೊಪ್ಪಿಗೆ ಮಹತ್ವದ ಪಾತ್ರ ವಹಿಸುತ್ತದೆ. ಕುಮಾರವ್ಯಾಸನು ಈ ಕಾಯಿದೆಯ ಅಂಶವನ್ನು ಸಮರ್ಥವಾಗಿ ಸುಂದರವಾಗಿ ಚಿತ್ರಿಸಿದ್ದಾನೆ. ಅದು ಒಂದು ವ್ಯಾಖ್ಯಾನವೆಂದರು ಕೂಡ ಕಾಯಿದೆಯ ಮೂಲಭೂತ ತತ್ವಗಳು ಕನ್ನಡದಲ್ಲಿ ಹರಿದು ಬಂದಿವೆ. ಅದು ಈ ರೀತಿ ಉಲ್ಲೇಖವಾಗಿದೆ : ಕಂದಮೂಲ ಫಲಗಳನ್ನು ಅರಸುತ್ತ ನಕುಲ ಸಹದೇವರು ಹೋಗಿ ಬರಿಗೈಯಿಂದ ಬರುತ್ತಾರೆ. ಅದನ್ನು ಕಂಡು ಧರ್ಮರಾಜ ಭೀಮನಿಗೆ ಸ್ವಲ್ಪದೂರ ಅಡವಿಯಲ್ಲಿ ಹೋಗಿ ಫಲಹುಡುಕಲು ಹೇಳುತ್ತಾನೆ. ಭೀಮ ಅಣ್ಣನ ಆಜ್ಞೆಯಂತೆ ವಿಪಿನಾಂತರದಲ್ಲಿ ಬಹುದೂರ ತೆರಳಿ ಒಂದು ಸರೋವರದ ದಂಡೆಗೆ ಬರುತ್ತಾನೆ. ಆನಿರ್ಮಲ ಸರೋವರದ ದಂಡೆಯ ಮೇಲೆ ಒಂದು ಭಾರಿ ನೀರಮಲಮರ. ಅದರಲ್ಲಿ ಆನೆಯ ಪ್ರಮಾಣದ ಒಂದೇ ಒಂದು ನೀರಲ ಹಣ್ಣು ಇರುವದನ್ನು ಕಾಣುತ್ತಾನೆ. ಆ ಗಿಡದ ಕೆಳಗೆ ಓರ್ವ ಋಷಿ ಧ್ಯಾನಾಸಕ್ತನಾಗಿ ಕುಳಿತಿರುವದು ಕಾಣಿಸುತ್ತದೆ. ಭೀಮನಿಗೆ ಆ ಹಣ್ಣುಕಂಡು ಸಂತೋಷವಾಯ್ತು. ಮರ ಹತ್ತಿ ಹಣ್ಣು ಕಿತ್ತು ಹೊತ್ತು ತರುತ್ತಾನೆ. ಈ ಭಾರಿ ಪ್ರಮಾಣದ ಹಣ್ಣು ಕಂಡು ಧರ್ಮರಾಜ ಚಕಿತನಾಗಿ, ತ್ರಿಕಾಲ ಜ್ಞಾನಿ ಸಹದೇವನಿಗೆ ಅದರ ವೃತ್ತಾಂತ ಕೇಳುತ್ತಾನೆ. ಸಹದೇವನು "ಅಣ್ಣಾ, ಇಂದು ಪಾಂಡವರ ಸರ್ವನಾಶ ಸನ್ನಿಹಿತವಾಗಿದೆ. ಈ ಹಣ್ಣು ಓರ್ವ ಋಷಿಗಾಗಿ ಮೀಸಲಾಗಿದ್ದದ್ದು

ಅವನ ಅಪ್ಪಣೆಯಿಲ್ಲದೆ ಯಾರು ಈ ಹಣ್ಣು ಹರಿಯುವರೋ ಅವರ ತಲೆ ಒಡೆದು ಸಹಸ್ರ ಹೋಳಾಗುವದು. ಭೀಮ ಋಷಿವರ ಅಪ್ಪಣೆಯಿಲ್ಲದೆ ಈ ಹಣ್ಣು ಕಿತ್ತು ತಂದಿರುವನು ಇಂದು ಸೂರ್ಯಾಸ್ತ ಸಮಯಕ್ಕೆ ಆ ಋಷಿ ಕಣ್ಣು ತೆರೆದು ನೋಡಿದಾಗ ಹಣ್ಣು ಇರದಿದ್ದರೆ ಆ ಶಾಪ ತಟ್ಟುತ್ತದೆ. ಭೀಮ ಸಾಯಲೇ ಬೇಕಾಗುತ್ತದೆ. ಒಂದು ವೇಳೆ ಭೀಮ ಸತ್ತರೆ ನಿಮ್ಮ ಒಪ್ಪಂದದ ಪ್ರಕಾರ ನಾವೆಲ್ಲರೂ ಅವನೊಡನೆ ಸಾಯಬೇಕಾಗುತ್ತದೆ. ಇಂಥಹ ದುರ್ಧರ ಪ್ರಸಂಗವೀಗ ಬಂದಿದೆ ಎಂದು ಹೇಳಿದನು.

ಧರ್ಮರಾಜನ ಹೇಳಿಕೆಯಂತೆ ದ್ರೌಪದಿ ಕೃಷ್ಣನನ್ನು ನೆನೆಯಲು ಕೃಷ್ಣ ಬಂದು ಎಲ್ಲವನ್ನೂ ತಿಳಿದ. ಆ ಹಣ್ಣನ್ನು ಭೀಮನ ಮೇಲೆ ಹೊರಿಸಿಕೊಂಡು ಆ ನೀರಲಮರದ ಬಳಿ ಬಂದ. ಆ ಜಂಬೂ ವೃಕ್ಷದಲ್ಲಿ ಆ ಹಣ್ಣು ಇದ್ದಜಾಗ ಸರಿಯಾಗಿ ಆರು ಆಳು ಎತ್ತರದಲ್ಲಿತ್ತು. ಆಗ ಕೃಷ್ಣನು ಹೇಳಿದ "ನಿವೆಲ್ಲರೂ ನಿಮ್ಮ ಗುಣಧರ್ಮಗಳನ್ನು ಸತ್ಯವಾಗಿ ಹೇಳಿದರೆ ಈ ಹಣ್ಣು ಒಂದೊಂದು ಆಳು ಮೇಲೇರುತ್ತ ತನ್ನ ಸ್ಥಾನ ಸೇರುತ್ತದೆ. ಈಗಾಗಲೇ ಸೂರ್ಯಾಸ್ತ ಸಮೀಪಿಸುತ್ತಿರುದರಿಂದ ತ್ವರೆಮಾಡಿರಿ" ಎಂದು ಹೇಳಿದ.

ಧರ್ಮರಾಜ ಸತ್ಯ ಎಂಬುದೆ ತಾಯಿತಂದೆಯು, ಸತ್ಯ ಎಂಬುದೆ ಬಂಧುಬಳಗವು, ಸತ್ಯ ವಾಕ್ಯಕೆ ತಪ್ಪಿ ನುಡಿಯೆನು" ಎಂದು ತನ್ನ ಮೂಲ ಗುಣವನ್ನು ಹೇಳಿದಾಗ, ಹಣ್ಣು ಒಂದು ಅಳು ಮೇಲೇರಿತು. ಅನಂತರ ಭೀಮ "ನನಗೆ ಮಾನವೇ ಅತೀ ಪ್ರಿಯವಾದದ್ದು. ಪ್ರಾಣವನ್ನು ಕೊಟ್ಟಾದರೂ ಮಾನವನ್ನು ಕಾಯ್ದುಕೊಳ್ಳುತ್ತೇನೆ." (ಪ್ರಾಣಾನ್ನಪಿ ಪರಿತ್ಯಜ್ಯ ಮಾನಂ ರಕ್ಷಯೇತ್) ಎಂದು ಹೇಳಿದ. ಆ ಫಲ ಮತ್ತೊಂದು ಆಳು ಮೇಲೇರಿತು. ಅರ್ಜುನ ತನ್ನ ಗಾಂಡೀವವೇ ತನಗೆ ಪ್ರಿಯವೆಂದು ಹೇಳಿದಾಗ ಮತ್ತೊಂದು ಆಳು ಮೇಲೇರಿತು. ನಕುಲ ಸಹದೇವರು ತಮ್ಮ ಅಣ್ಣನ ಆಜ್ಞಾಪಾಲನೆಯೇ ತಮಗೆ ಪ್ರಿಯವೆಂದು ಹೇಳಿದಾಗ ಮತ್ತೊಂದು ಆಳು ಮೇಲೇರಿತು. ಐದು ಆಳು ಎತ್ತರದಲ್ಲಿ ಆ ಹಣ್ಣು ಆಕಾಶದಲ್ಲಿ ತೂಗ ಹತ್ತಿತು. ಅಗ ಬಂತು ದ್ರೌಪದಿಯ ಸರತಿ. ದ್ರೌಪದಿ ಕೃಷ್ಣನಿಗೆ ಮಣಿದು ಬಹಳ ಗಂಭೀರಳಾಗಿ "ಕಾಯಾ ವಾಚಾ ಮನಸಾ" ಈ ಪಂಚ ಪಾಂಡವರ ಸೇವಕಳಾದೆನಲ್ಲದೆ ಅನ್ಯರನ್ನು ನೆನೆದಿಲ್ಲ. ಎಂದೊಡನೆ ಐದು ಆಳ ಮೇಲೇರಿದ ಹಣ್ಣು ಕೆಳಗೆ ಬಿದ್ದು ಬಿಟ್ಟಿತು. ದ್ರೌಪದಿಯ ದೋಷ ಜಗಜ್ಜಾಹಿರವಾಯಿತು. ತಪ್ಪೊಪ್ಪಿಗೆ ಎಂದರೆ ತನ್ನ ತಪ್ಪನ್ನು ಖಚಿತವಾಗಿ ಒಪ್ಪಿಕೊಳ್ಳುವದು (Confession is an admission of guilt in an unequivocal terms). ಆದರೆ ದ್ರೌಪದಿ ಹಾಗೆ ಮಾಡಲಿಲ್ಲ

ಆಗ ಕೃಷ್ಣ ಹೇಳುತ್ತಾನೆ, "ತಂಗಿ ಕೃಷ್ಣೆ, ಪಾಂಡವರ ಅಳಿವು ಉಳಿವು ಈಗ ನಿನ್ನ ಮೇಲಿದೆ. ನಿನ್ನ ತಪ್ಪು ಎಷ್ಟು ಗಂಭೀರವಾಗಿದ್ದರೂ ನಿನ್ನ ಪತಿಗಳಿಂದ ನಿನಗೆ ಏನೊಂದು ಹಾನಿಯಾಗದಂತೆ ನಿನ್ನ ರಕ್ಷಣೆಯ ಭಾರ ನನ್ನ ಮೇಲಿದೆ. ನಾನು ನಿನಗೆ ಈ ವಿಷಯದಲ್ಲಿ ಜಾಮೀನು ನೀಡುತ್ತೇನೆ.

ಕಾರಣ ನಿನ್ನ ಮನದಲ್ಲಿರುವ ನಿನಗೆ ಪ್ರಿಯವಾದದನ್ನು ಅದೇನೇ ಇರಲಿ ಹೇಳಿಬಿಡು'' ಎಂದು ಸಲಹೆ ಇತ್ತ. ಆಗ ದ್ರೌಪದಿ ಹೇಳಿದಳು ''ಅಣ್ಣಾ ನನಗೆ ಐವರು ಪತಿಗಳಿದ್ದರೂ, ಚಿತ್ತೋಪಚಾರಕೆ ನೆನೆವೆನಾಂ ಕರ್ಣನ'' ಎಂದು ಹೇಳಿದಳಂತೆ. ಆಗ ಆ ಹಣ್ಣು ತುಂಬು ಕೆಳಗಾಗಿ ತನ್ನ ಮೂಲಸ್ಥಾನಕ್ಕೆ ಅಂಟಿಕೊಂಡಿತು. ಹೀಗಾಗಿ ನೀರಲ ಹಣ್ಣಿಗೆ ಎರಡು ತುಂಬು ಉಂಟಾಗಿವೆ ಎಂಬ ದಂತ ಕಥೆ ಇದೆ.

ಕರ್ನಾಟಕದಲ್ಲಿ ಆಳಿದ, ಸಾಮಾನ್ಯವಾಗಿ ಎಲ್ಲ ರಾಜಮನೆತನಗಳ ಕಾಯಿದೆ ವ್ಯವಹಾರ ಕನ್ನಡದಲ್ಲಿರುವದನ್ನು ಕಾಣುತ್ತೇವೆ. ಅದರಲ್ಲೂ ವಿಜಯನಗರದ ರಾಜರಕಾಲದಲ್ಲಿ ವೈಷ್ಣವರಿಗೂ ಜೈನರಿಗೂ ನಡೆದ ತಂಟೆಯ ತೀರ್ಮಾನ ಕನ್ನಡದಲ್ಲಿರುವದನ್ನು ಗಮನಿಸಬಹುದು.

ಕ್ರಿ.ಶ. ೧೩೬೮ರಲ್ಲಿ ವಿಜಯನಗರದ ವೀರ ಬುಕ್ಕರಾಯನು ರಾಜ್ಯವಾಳುತ್ತಿರುವಾಗ ಜೈನರಿಗೂ ಮತ್ತು ವೈಷ್ಣವರಿಗೂ ವ್ಯಾಜ್ಯವುಂಟಾಯಿತು. ಜೈನಮತಕ್ಕೆ ಪಾರಂಪರಾಗತವಾಗಿ ಸಲ್ಲತಕ್ಕ ಮನ್ನಣೆ ಸಿಕ್ಕಿರಲಿಲ್ಲವೆಂದು ಜೈನ ಮುಖಂಡನಾದ ಕಲ್ಲೆಯರ ಹರ್ವಿಸೆತ್ರಿಯ ಮಗ ಬಸವಿಸೆಟ್ಟಿ ಎಂಬುವನು ರಾಜನಲ್ಲಿ ದೂರನ್ನು ಒಯ್ದನು. ಆಗ ಶ್ರೀ ವೈಷ್ಣವ ಮತದ ಪ್ರಮುಖರನ್ನಲ್ಲದೆ ತಿರುಕುಲ ಜಾಂಬುವಕುಲ ಮೊದಲಾದ ಕೆಳ ವರ್ಗದ ಜನಗಳನ್ನು ಕರೆಸಿ ಅವರೆಲ್ಲರ ಸಮಕ್ಷಮ ನ್ಯಾಯದಾನ ಮಾಡಿದನು. ಅಷ್ಟೇ ಅಲ್ಲದೆ ಈ ಮಹತ್ವದ ತೀರ್ಪಿನ ಶಾಸನವನ್ನು ಶ್ರವಣಬೆಳಗೊಳದಲ್ಲಿ ಮಾತ್ರವಲ್ಲದೆ ಕಲ್ಲೆಹದಲ್ಲಿ ಮತ್ತು ರಾಜ್ಯದ ಸಮಸ್ತ ಬಸದಿಗಳಲ್ಲಿ ನಿಲ್ಲಿಸುವಂತೆ ಏರ್ಪಾಡು ಮಾಡಿದನು. ಇದರ ಲೆಕ್ಕವನ್ನು ಶ್ರೀ ವೈಷ್ಣವರೇ ನಿರ್ವಹಿಸಬೇಕೆಂದು ವಿಧಿಸಲಾಯಿತು. ಅದರ ಪಾಠ ಕೆಳಗಿನಂತಿದೆ.

''ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರ ಅರಿರಾಯ ವಿಭಾತ ಭಾಷೆಗೆ ತಪ್ಪುವ ರಾಯರಗಂಡ ಶ್ರೀ ವೀರಬುಕ್ಕರಾಯನು ಪೃಥ್ವೀವರಾಜ್ಯವ ಮಾಡುವ ಕಾಲದಲ್ಲಿ ಜೈನರಿಗೂ ಭಕ್ತರಿಗೂಸಂವಾದಜವಾದಲ್ಲಿ ಆನೆಗೊಂದಿ ಹೊಸಪಟ್ಟಣ ಪೆನಗೊಂಡೆ ಕಲ್ಲೆಹ ಪಟ್ಟಣವೊಳಗಾದ ಸಮಸ್ತನಾದ ಭವ್ಯಜನಂಗಳು ಆ ಬುಕ್ಕರಾಯರಿಗೆ ಭಕ್ತರು ಮಾಡುವ ಅನ್ಯಾಯಗಳನ್ನು ಬಿನ್ನಹ ಮಾಡಲಾಗಿ ಕೋಟಿಪ್ ತಿರುಮತಿ ಪೆರುಮಾಳ್ ಕೋಟಿಪ್ ತರುನಾರಾಯಣಪುರ ಮುಖ್ಯವಾದ ಸಕಳಾತಿರುವಿಡಿ ತಣ್ಣೀರವರು ನಾಲ್ವೆಂತ್ತೆಂಟಂ ಜನಾಂಗಗಳನ್ನು ಸಾವಂತ ಭೊವಕ್ಕಳು ತಿರುಕುಲ ಜಾಂಬುವ ಕುಲವೊಲಗಾದ ಹದಿನೆಂಟು ನಾಡ ಶ್ರೀ ವೈಷ್ಣವರ ಕೈಯಾಳು ಮಹಾರಾಯನು ವೈಷ್ಣವರ ಕೈಯಲು ಜೈನರಕ್ಕೆ ವಿಡಿದು ಕೊಟ್ಟು ಈ ಜೈನದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವ ಹಾನಿವೃದ್ಧಿಯಾಗಿ ಪಾಲಿಸುವರು. ಈ ಮರ್ಯಾದೆಯಲು ಪಂಚ ಮಹಾವಾದ್ಯಗಳೂ ಕಳಶವೂ ಸಲ್ಲುವುದು. ಜೈನದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವ ಹಾನಿವೃದ್ಧಿಯಾಗಿ ಪಾಲಿಸುವರು. ಈ ಮರ್ಯಾದೆಯು ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀ ವೈಷ್ಣವರು ಶಾಸನವ ನಟ್ಟು ಪಾಲಿಸುವರು. ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವ ಸಮಯವು ಜೈನದರ್ಶನವ ರಕ್ಷಿಸಿಕೊಂಡು ಬಂದವು.

ವೈಷ್ಣವರೂ ಜೈನರು ಒಂದು ಭೇದವಾಗಿ ಕಾಣಲಾಗದು ತಿರುಮಲೆಯ ತಾತಯಂಗಳು ಸಮಸ್ತ ರಾಜ್ಯದ ಭವ್ಯ ಜನಂಗಳ ಅನುಮತದಿಂದೆ ಬೆಳಗೊಳದ ತೀರ್ಥದಲ್ಲಿ ವೈಷ್ಣವ ಅಂಗರಕ್ಷೆಗೋಸ್ಕರ ಸಮಸ್ತ ರಾಜ್ಯದೊಳಗುಳ್ಳಂತಹ ಜೈನರ ಬಾಗಿಲು ಗಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ೧ ಹಣಕೊಟ್ಟು ಆಯೆತ್ತಿದ ಹೊನ್ನಿಂಗೆದೇವರ ಅಂಗರಕ್ಷೆಗೆಯಿರ್ಪತ್ತಾಳ ಸಂಚವಿಟ್ಟು ಮಿಕ್ಕ ಹೊನ್ನಿಂಗೆ ಜೀರ್ಣಜಿನಾಯಂಗಳಿಗೆ ಸೊಗೆಯ ಸಿಕ್ಕುವರು. ಈ ಮರಿಯಾದೆಯಲು ಚಂದ್ರಾರ್ಕರುಳ್ಳನ್ನಂ ತಪ್ಪಲೀಯದೆ ವರ್ಷ ವರ್ಷಕ್ಕೆ ಕೊಟ್ಟು ಕೀರ್ತಿಯನೂ ಪುಣ್ಯವನೂ ಉಪಾರ್ಜಿಸಿಕೊಂಬುದು. ಈ ಮಾಡಿದ ಕಟ್ಟಳೆಯನು ಅವನೊಬ್ಬ ಮೀರಿದವನು ರಾಜದ್ರೋಹಿ ಸಂಘಸಮದಾಯಕ್ಕೆ ದ್ರೋಹಿ'' (ಕನ್ನಡದಲ್ಲಿ ಕಾನೂನು ಸಾಹಿತ್ಯ ರಾ.ಯ. ಧಾರವಾಡಕರ ಪುಟ ೭೩-೭೪)

ಈ ಕಾನೂನನ್ನು ಅವಲೋಕಿಸಿದಾಗ ವಿಜಯನಗರದ ಕಾಲದಲ್ಲಿ ಕಾಯಿದೆಯಾಗಲೀ ನ್ಯಾಯದಾನವಾಗಲೀ ಕನ್ನಡದಲ್ಲಿಯೇ ನೆಡೆಯುತ್ತಿತ್ತು ಎಂಬುದನ್ನು ಖಚಿತವಾಗಿ ಒಪ್ಪಿಕೊಳ್ಳಬಹುದು.

ವಿಜಯನಗರದ ಕಾಲದಲ್ಲಿ ಅರಿವೀಡು ವಂಶಗಳು ರಾಜ್ಯವಾಳಿದಾಗ ಸ್ವಲ್ಪಮಟ್ಟಿಗೆ ತೆಲುಗಿನ ಪ್ರದೇಶವಾಗಿದ್ದಿರಬಹುದಾದರೂ ಜನಸಾಮಾನ್ಯರ ಆಡುಭಾಷೆಯಾದ ಕನ್ನಡದಲ್ಲಿಯೇ ಕಟ್ಟಳೆಗಳಿರುವದು, ನ್ಯಾಯದಾನ ಕನ್ನಡದಲ್ಲಿಯೇ ನಡೆಯುತ್ತಿದ್ದುದು ಸಾಮಾನ್ಯವಾಗಿತ್ತು. ಯಾಕೆಂದರೆ ವಿಜಯನಗರ ಸಾಮ್ರಾಜ್ಯದ ಕೊನೆಯ ಕಾಲಕ್ಕೆ ವೆಲೂರಿನ ವೆಂಕಟಾದ್ರಿ ನಾಯಕನು ರಾಜ್ಯಭಾರ ಮಾಡುತ್ತಿದ್ದಾಗಿನ ಘಟನೆ ಉಲ್ಲೇಖನೀಯ.

``ಹುಚ್ಚಪ್ಪ ದೇವನೆಂಬ ವೀರಶೈವನು ಹಳೆಬೀಡಿನ ವಿಜಯ ಪಾರ್ಶ್ವ ಬಸದಿಯ ಕಂಬಗಳ ಮೇಲೆ ಲಂಗ ಲಾಂಛನವನ್ನು ಹಾಕಿದನು ಮತ್ತು ವಿಜಯದತ್ತನೆಂಬ ಜೈನನು ಅದನ್ನು ತೊಡೆದು ಹಾಕಿದನು. ಈ ಬಗ್ಗೆ ದೇಶಭಾಗದ ದೇವಪೃಥ್ವಿಮಹಾಮತ್ತಿನ ವೀರಶೈವ ಮುಂಖಡರಾದ ಹಳೇಬೀಡಿನ ಬಸವದೇವ ಪುಷ್ಪಗಿರಿಯ ಪಟ್ಟದ ದೇವ ಮೊದಲಾದವರೆಡೆಗೆ ಜೈನರಾದ ಹಾಸನದ ದೆವಪ್ಪ ಶೆಟ್ಟಿಯ ಮಗ ಪದ್ಮಣ್ಣ ಶೆಟ್ಟಿ ಮೊದಲಾದವರು ವ್ಯಾಜ್ಯ ಒಯ್ದರು. ಇದರಲ್ಲಿ ವಾದಿಯಾಗಿದ್ದ ಪದ್ಮಣ್ಣ ಶೆಟ್ಟಿಯು ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಅವನು ಸ್ಯಾದ್ವಿದ ಮತ ಗಗನ ಸೂರ್ಯನೂ ಆಹಾರಭಯ ಭೈಷಜ್ಯ ಶಾಸ್ತ್ರದಾನ ವಿನೋದನೂ ಖಂಡ ಸ್ಫಾತಿಕ ಜೀರ್ಣ ಜಿನತ್ಯಾಲಯ ಉದ್ಧಾರಕನೂ ಜಿನಸಾಧೊದಕ ಪವಿತ್ರಿಕೃತ ಉತ್ತಮಾಂಗನೂ ಮತ್ತು ಸಮ್ಯತ್ವಾದಿ ಅನೇಕ ಗುಣಗಳ ಅಲಂಕೃತನೂ ಆಗಿದ್ದನು. ಕಾರಣ ವೆಂಕಟಾದ್ರಿಯ ಬಲಗೈಯಾಗಿದ್ದ ಮಂತ್ರಿ ಕೃಷ್ಣಪ್ಪಯ್ಯನಿಗೆ ವಿನಂತಿಮಾಡಿಕೊಂಡು ಕೃಷ್ಣಪ್ಪಯ್ಯನ ಆಜ್ಞೆಯ ಮೇರೆಗೆ ನ್ಯಾಯ ನಿರ್ಣಯಿಸಿ ಶಾಸನ ಸಾರಲಾಯಿತು. ಅದರ ಸಾರಾಂಶ ``ಈ ಜೈನ ಧರ್ಮಕ್ಕೆ ಅವನೋರ್ವನು ವಿಘ್ನವ ಮಾಡಿದರೆ ಆತನು ತಮ್ಮ ಮಹಾಮಹತ್ರ ಪದವ ಕೂಡಿದವನಲ್ಲ ಶಿವದ್ರೋಹಿ ಜಂಗಮದ್ರೋಹಿ ವಿಭೂತಿ ದುದ್ರಾಕ್ಷಿಗೆ ತಪ್ಪಿದವನು ಕಾಶಿರಾಮೇಶ್ವರಾದಿ ತೀರ್ಥಗಳ ಲಿಂಗಕ್ಕೆ ತಪ್ಪಿದವರು ಈ ಮಹಾಮಹತ್ತಿನ ವಪ್ಪಿತ!! ವರ್ಧತಾಂ ಜಿನ ಶಾಸನಂ.

ಹೀಗೆ ವಿಜಯನಗರದ ಧೀರ್ಘ ಆಳಿಕೆಯಲ್ಲಿ ಕಾನೂನು ಕನ್ನಡದಲ್ಲಿಯೇ ಇರುವುದನ್ನು ಕಾಣುತ್ತೇವೆ.

ಮುಂದೆ ಕರ್ನಾಟಕದಲ್ಲಿ ಮಹಮದೀಯರ ರಾಜ್ಯಗಳು ಸ್ಥಾಪಿತವಾದನಂತರ ಅವರ ನ್ಯಾಯಾಲಯ ಸ್ಥಾಪಿತವಾದನಂತರ, ಅವರ ನ್ಯಾಯಾಲಯದ ಭಾಷೆ ಪರ್ಶಿಯನ್ ಆಗಿದ್ದರೂ ಕೂಡ, ರಾಜರ ತಿರ್ಮಾನಗಳನ್ನು ಜನ ಸಾಮಾನ್ಯರಿಗೆ ತಿಳಿಯುವ ಕನ್ನಡದಲ್ಲಿ ಹೇಳುತ್ತಿದ್ದರೆಂದು ದಾಖಲೆಗಳಿವೆ. ಕನ್ನಡದಲ್ಲಿ ಕಾನೂನಿನ ದುರ್ದೆಶೆ ಪ್ರಾರಂಭವಾದದ್ದು ಮರಾಠರ ಆಳಿಕೆಯಲ್ಲಿ. ಕನ್ನಡ ಜಾಗೆಯನ್ನು ಮೋಡಿ ಆಕ್ರಮಿಸಿಕೊಂಡಿತು. ಕನ್ನಡ ಕೂಲಿಮಠದ ಶಿಕ್ಷಣದ ಮಟ್ಟಿಗೆ ಮಾತ್ರ ಸೀಮಿತವಾಯಿತು. ಆದರೆ ವಿಜಯನಗರದ ಉತ್ತರಾಧಿಕಾರಿಗಳಾದ ಮೈಸೂರ ಅರಸರ ಆಳಿಕೆಯಲ್ಲಿ ಕನ್ನಡ ಭಾಷೆ ಜೀವಂತವಾಗಿ ಉಳಿಯಿತು. ಅಷ್ಟೇ ಅಲ್ಲ ಅಭಿವೃದ್ಧಿ ಕೂಡ ಹೊಂದಿತು. ಮೈಸೂರ ಅರಸೊತ್ತಿಗೆಗೆ ಗ್ರಹಣ ಹಿಡಿದು, ಹೈದರ ಅಲಿ ಹಾಗೂ ಟಿಪ್ಪು ಸುಲ್ತಾನರ ಆಳಿಕೆಯಲ್ಲಿ ಆಡಳಿತ ಭಾಷೆ ಕನ್ನಡವಾಗಿರದಿದ್ದರೂ ಕನ್ನಡ ರಾಜಮನ್ನಣೆಯನ್ನು ಕಳೆದುಕೊಂಡಿರಲಿಲ್ಲ.

೨. ಬ್ರಿಟಿಶರ ಆಡಳಿತದಲ್ಲಿ ಕನ್ನಡದಲ್ಲಿ ಕಾನೂನು

ಕಂಪನಿ ಸರಕಾರದಲ್ಲಿ ಅದಾಲತಗಳು, ಮೌಲ್ವಿಗಳ ಮತ್ತು ಪಂಡಿತರ ಸಹಾಯದಿಂದ ಹೆಚ್ಚಾಗಿ ಪರ್ಶಿಯನ್ ಭಾಷೆಯಲ್ಲಿ ತಮ್ಮ ಕಾರ್ಯಕಲಾಪ ನಡೆಸುತ್ತಿದ್ದವು. ಸುಮಾರು ೧೮೩೮ರ ಸುಮಾರಿಗೆ ನ್ಯಾಯಾಲಯಗಳಲ್ಲಿ ಪರ್ಶಿಯನ್ ಭಾಷೆಯ ಉಪಯೋಗ ನಿಂತು ಹೋಯಿತು. ಮುಂಬೈ ಕರ್ನಾಟಕ ಭಾಗದಲ್ಲಿ ೧೮೩೮ಕ್ಕಿಂತ ಪೂರ್ವದಲ್ಲಿಯೇ ನ್ಯಾಯಾಲಯಗಳಲ್ಲಿ ಕನ್ನಡವನ್ನು ಕಡ್ಡಾಯಗೊಳಿಸಲು ಕ್ರಮತೆಗೆದುಕೊಂಡಿರುವದು ಕಂಡು ಬರುತ್ತದೆ. ಸದರ್ನ ಮರಾಠಾ ಪ್ರದೇಶವೆಂದು ಕರೆಯಲ್ಪಡುತ್ತಿದ್ದ ಇಂದಿನ ಉತ್ತರ ಕರ್ನಾಟಕದ ಬಹು ಭಾಗದಲ್ಲಿ ಅದರಲ್ಲೂ ಧಾರವಾಡ ಹಾಗೂ ಬೆಳಗಾಂವ ಜಿಲ್ಲೆಯ ಆಡು ಭಾಷೆ ಕನ್ನಡವಾಗಿರುವದರಿಂದ ನ್ಯಾಯಾಲಯಗಳ ನಡವಳಿಕೆ ಕನ್ನಡದಲ್ಲಿ ಇರಬೇಕೆಂಬುದನ್ನು ಮನಗಂಡ ಮುಂಬೈ ಸರಕಾರ ಸಾಕ್ಷಿಗಳ ಹೇಳಿಕೆ ಹಾಗೂ ನ್ಯಾಯಾಲಯದ ನಡವಳಿಕೆ ಕನ್ನಡದಲ್ಲಿ ಇರಬೇಕೆಂದೂ, ಒಂದು ವೇಳೆ ನ್ಯಾಯಾಲಯದ ನೌಕರರಿಗೆ ಕನ್ನಡ ಬಾರದೇ ಇದ್ದಲ್ಲಿ, ಅವರು ನಿರ್ಧಿಷ್ಟ ಕಾಲಾವಧಿಯಲ್ಲಿ ಕನ್ನಡ ಕಲಿಯಬೇಕೆಂದೂ, ಒಂದು ವೇಳೆ ಅವರು ಅಸಮರ್ಥರಾದರೆ ಅವರನ್ನು ವರ್ಗಾಯಿಸಿ ಕನ್ನಡ ತಿಳಿದ ನೌಕರರನ್ನು ನೇಮಿಸಬೇಕೆಂದೂ ಮುಂಬೈ ಗವರ್ನರ ಜನರಲ್ ಇನ್ ಕೌನ್ಸಿಲ್ ಅವರು ನಿರ್ಣಯ ತೆಗೆದುಕೊಂಡು ಈ ಜಿಲ್ಲೆಗಳಲ್ಲಿಯ ನ್ಯಾಯಾಲಯಗಳಲ್ಲಿ ಕನ್ನಡ ಜಾರಿಗೊಳಿಸಿದರು. ಈ ಸಂದರ್ಭದಲ್ಲಿ ೨೦-೪-೧೯೧೮ ರಲ್ಲಿ ಬೆಳಗಾಂವಿ ಜಿಲ್ಲಾಧಿಕಾರಿ ಡನಲಪ್ ಎಂಬುವರು ಧಾರವಾಡದ ಜುಡಿಶಿಯಲ್ ವಿಜಿಟಿಂಗ ಕಮೀಷನರ್ ಗ್ರಿನಹಿಪ್ ಅವರಿಗೆ ವರದಿ ಕಳಿಸುತ್ತ "ತನ್ನ ಕಚೇರಿಯ ನ್ಯಾಯವಿಭಾಗದ ದಂಡ ಶಾಖೆಯಲ್ಲಿ ಕನ್ನಡವನ್ನು ಈಗಾಗಲೆ ಬಳಕೆಗೆ ತಂದಿದ್ದು ಗಮನಾರ್ಹ ಬೆಳವಣಿಗೆ. ನವೆಂಬರ ೧ನೇ ತಾರೀಖಿನಿಂದ

ಬೆಳಗಾಂವಿ ಜಿಲ್ಲೆಯಾದ್ಯಂತ ಕನ್ನಡವನ್ನು ವ್ಯವಹಾರ ಭಾಷೆಯಾಗಿ ಜಾರಿಗೆ ತರಲು ಆದೇಶವನ್ನು ಹೊರಡಿಸಲಾಗಿದೆ'' ಎಂದು ಬರೆದಿದ್ದಾನೆ. ೧೮೯೩ರ ಸುಮಾರಿಗೆ ಸಂಗ್ರಹಿಸಿದ ಮಾಹಿತಿಯ ಪ್ರಕಾರ ಬೆಳಗಾಂವ ಜಿಲ್ಲೆಯ ೫,೪೨,೫೨೯ ಜನಸಂಖ್ಯೆಯಲ್ಲಿ ೪,೩೮,೦೪೦ ಜನರ ಮನೆಮಾತು ಕನ್ನಡವೆಂದೂ ಅದರಂತೆ ಧಾರವಾಡ ಜಿಲ್ಲೆಯ ಒಟ್ಟು ಜನಸಂಖ್ಯೆ ೩,೯೦,೯೬೭ರಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ೩,೩೬,೧೨೮ ಆಗಿದ್ದುದು ಕಂಡು ಬರುತ್ತದೆ. (ಪುಟ ೫೩, ಆಂಗ್ಲರ ಆಡಳಿತದಲ್ಲಿ ಕನ್ನಡ) ಈ ಆಧಾರದ ಮೇಲೆಯೇ ೧೮೩೭ ಜೂನ್ ೧೬ ರಂದು ಮುಂಬೈ ಸರ್ಕಾರ ಸದರ ಅದಾಲತ ನ್ಯಾಯಾಧೀಶರಿಗೆ ನ್ಯಾಯಾಲಯಗಳಲ್ಲಿ ಕನ್ನಡ ಬಳಸುವ ಬಗೆಗೆ ನಿರ್ದೇಶಿಸಿದೆ. ಅಲ್ಲದೆ ಪ್ರಾಂತೀಯ ನ್ಯಾಯಾಧೀಶನೊಬ್ಬನು ಕನ್ನಡದಲ್ಲಿ ನ್ಯಾಯಾಲಯದ ನಡಾವಳಿಗಳನ್ನು ಬರೆಯಲು ಇಚ್ಛಿಸಿದರೆ ಅದನ್ನು ತಡೆಯಲಾಗದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಜ್ಯುಡಿಸಿಯಲ್ ಕಮೀಶನರರು ಈ ಭಾಗದ ನ್ಯಾಯಾಲಯದ ನಡುವಳಿಕೆಗಳು ಕನ್ನಡ ಮತ್ತು ಮರಾಠಿ ಎರಡರಲ್ಲೂ ಇರಬೇಕೆಂದು ಸಲಹೆಯನ್ನು ಮುಂಬೈ ಸರ್ಕಾರ ತಳ್ಳಿಹಾಕಿ ನ್ಯಾಯಾಲಯದ ನಡುವಳಿಕೆಗಳು ಆಯಾ ದೇಶ ಭಾಷೆಯಲ್ಲಿಯೇ ಇರತಕ್ಕದ್ದು. ಕಕ್ಷಿದಾರನಿಗೆ ತಿಳಿಯದೆ ಇದ್ದ ಸಂದರ್ಭದಲ್ಲಿ ಮಾತ್ರ ಅವನ ಭಾಷೆಗೆ ಅದನ್ನು ಭಾಷಾಂತರಿಸಬಹುದು ಎಂದು ಹೇಳಿದ್ದಾರೆ. ಕನ್ನಡ ಬಲ್ಲ ನೌಕರ ವರ್ಗ ದೊರೆಯುವದು ಕಠಿಣ ಎಂಬ ಗ್ರಿನಹಿಪ್ ಅವರ ವಾದವನ್ನು ತಿರಸ್ಕರಿಸುತ್ತಾ ಪರಿಸ್ಥಿತಿ ಹೀಗಿದ್ದರೆ ನೆರೆಯ ಜಿಲ್ಲೆಗಳಿಂದ ಕನ್ನಡ ಬಲ್ಲ ನೌಕರರನ್ನು ನೇಮಿಸಬೇಕೆಂದು ಆದೇಶಿಸಲಾಗಿದೆ.

ಕೆಳಹಂತದಿಂದ ಮೇಲ್ಮಟ್ಟದವರೆಗಿನ ನ್ಯಾಯಾಲಯಗಳಲ್ಲಿ ಕನ್ನಡ ಬಳಕೆ ಯಾಗುತ್ತಿದ್ದದ್ದನ್ನು ಸಮರ್ಥಿಸಲು ನ್ಯಾಯಾಲಯದ ನೂರಾರು ಠರಾವುಗಳು ಅಂದು ಕನ್ನಡದಲ್ಲಿರುವದನ್ನು ಕಾಣುತ್ತೇವೆ. ೧೮೪೧ರಲ್ಲಿ ಧಾರವಾಡ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಕೊಟ್ಟ ಠರಾವಿನ ನಕಲು ಉಪಲಬ್ಧವಿರುವದಲ್ಲದೆ ಶ್ರೀ ಮಹದೇವ ಬಣಕಾರ ಅವರು ಅತಿ ಪ್ರಯಾಸದಿಂದ ಇಂಥ ಎಷ್ಟೋ ಠರಾವುಗಳನ್ನು ಸಂಗ್ರಹಿಸಿ ಅವುಗಳನ್ನು ಕೆಲವನ್ನು ತಮ್ಮ 'ಆಂಗ್ಲರ ಆಡಳಿತದಲ್ಲಿ ಕನ್ನಡ' ಎಂಬ ಹೆಬ್ಬೊತ್ತಿಗೆಯಲ್ಲಿ ಪ್ರಕಟಿಸಿರುವದು ಗಮನಾರ್ಹ. ಕೇವಲ ಉತ್ತರ ಕರ್ನಾಟಕದ ನ್ಯಾಯಾಲಯಗಳಲ್ಲಿ ಅಷ್ಟೇ ಅಲ್ಲ ಅಂದಿನ ಹೈದರಾಬಾದ ಕರ್ನಾಟಕ ಮತ್ತು ಹಳೇ ಮೈಸೂರಿನ ನ್ಯಾಯಾಲಯಗಳಿಗೂ ಈ ಮಾತು ಅನ್ವಯಿಸುತ್ತದೆ. ಅಂದು ನ್ಯಾಯಾಲಯಗಳಲ್ಲಿ ಮಂಡಿಸುತ್ತಿದ್ದ ಪ್ರಮಾಣ ಕೂಡ ''ನಾನು ಏನು ಹೇಳುತ್ತೇನೋ ಅದು ನಿಶ್ಚಯವಾಗಿರುವದು. ಯಾವತ್ತು ನಿಶ್ಚಯವಾಗಿ ಇರುವದು. ಯತಾರ್ಥವಾದದ್ದಲ್ಲದೆ ಮತ್ತೊಂದು ಹೇಳುವದಿಲ್ಲವೆಂದು ಸರ್ವಚೈತನ್ಯ ಸ್ವರೂಪನಾದ ಭಗವಂತನ ಸನ್ನಿಧಿಯಲ್ಲಿ ಸತ್ಯವಾಗಿ ಹೇಳುತ್ತೇನೆ.'' ಎಂಬುದು ಇಂದು ನ್ಯಾಯಾಲಯದಲ್ಲಿ ಪ್ರಮಾಣ ಸ್ವೀಕರಿಸುವ ರೀತಿ, ''ದೇವರ ಮುಂದೆ ಪ್ರಮಾಣ ಮಾಡಿ ಸತ್ಯವಾಗಿ ಹೇಳುತ್ತೇನೆ ಸತ್ಯವಲ್ಲದೇ ಬೇರೇನೂ ಹೇಳುವದಿಲ್ಲ, ಹೇಳುವದೆಲ್ಲಾ ಸತ್ಯ ಇದಕ್ಕೆ ಅತಿ ಸಮೀಪವಾಗಿದೆ.''

ನ್ಯಾಯಾಲಯಗಳಲ್ಲಿ ಕನ್ನಡವನ್ನು ಬಳಸಲು ಅನುಕೂಲವಾಗಲು ಅನೇಕ ಕಾಯಿದೆ ಪುಸ್ತಕಗಳು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸಲ್ಪಟ್ಟಿರುವದು ಕಂಡುಬರುತ್ತದೆ. ಅಲ್ಲದೆ ೧೮೭೯ರ ಸುಮಾರಿಗೆ ನ್ಯಾಯಾಲಯದ ಠರಾವುಗಳನ್ನು ಪ್ರಕಟಿಸುವ ನಿಯತಕಾಲಿಕೆ ಕೂಡ ಹೊರಡುತ್ತಿದ್ದುದು ಗಮನಾರ್ಹ.

ವಕೀಲಿ ವೃತ್ತಿಯನ್ನು ಬಯಸುವವರು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಅರ್ಹತಾ ಪತ್ರಗಳನ್ನು ಪಡೆಯಲು ನಿಗದಿಪಡಿಸಿದ ವಿದ್ಯಾಮಟ್ಟ, ಹಾಗೂ ನಡತೆ ಪ್ರಮುಖ ನಿರ್ಣಯ ಅಂಶಗಳಾಗಿದ್ದು ಆವುಗಳಲ್ಲಿ ಯಾವುದೇ ರೀತಿಯ ವಿನಾಯತಿಯನ್ನು ಕೊಡಲಾಗುವದಿಲ್ಲವೆಂದು ಮುಂಬೈ ಸರಕಾರ ಹೊರಡಿಸಿದ ಪ್ರಕಟನೆ ಕನ್ನಡದಲ್ಲಿದೆ. ಅಲ್ಲದೆ ನೇಟಿವ್ ಸಬಾರ್ಡಿನೇಟ ಮ್ಯಾಜಿಸ್ಟ್ರೇಟ್ ಪರೀಕ್ಷೆಯಲ್ಲಿ ಅಭ್ಯರ್ಥಿಯು ತನ್ನ ಪ್ರಾದೇಶಿಕ ಭಾಷೆಯಲ್ಲಿ ಬರೆಯಲು ಅಂದು ಅವಕಾಶ ಕಲ್ಪಿಸಿದ್ದರು.

ಆಂಗ್ಲರು ನ್ಯಾಯಾಲಯಗಳಲ್ಲಿ ಕನ್ನಡ ಬಳಕೆಯನ್ನು ತಂದುದು ಕನ್ನಡ ಭಾಷೆಯಲ್ಲಿ ನ್ಯಾಯ ನೀಡುವ ಅವಶ್ಯಕತೆಯನ್ನು ಮನಗಂಡಿದ್ದರಿಂದ. ಪಕ್ಷಗಾಗರರಿಗೆ ತಿಳಿಯುವ ಭಾಷೆಯಲ್ಲಿ ನ್ಯಾಯನಿರ್ಣಯವಾಗದಿದ್ದ ಪಕ್ಷದಲ್ಲಿ ಅದು ನ್ಯಾಯದಾನವೆನಿಸಲಾರದು. ಬ್ರಿಟನ್ನಿನ ದೊರೆ ಎರಡನೇಯ ಜಾರ್ಜ ನ್ಯಾಯಾಲಯಗಳಲ್ಲಿಯ ಭಾಷೆಯ ಬಗೆಗೆ ಹೊಂದಿದ ಅಭಿಪ್ರಾಯ ನಮ್ಮ ನ್ಯಾಯಾಲಯಗಳಲ್ಲಿ ಭಾಷೆಯ ನೀತಿಗೂ ಇಂದೂ ಅನ್ವಯಿಸುತ್ತದೆ. ಅವನ ಅಭಿಪ್ರಾಯದಂತೆ "ಕಾನೂನ ವೃತ್ತಿಯಲ್ಲಿರುವ ವ್ಯಕ್ತಿಗಳನ್ನುಳಿದು ಬೇರೆಯವರಿಗೆ ಅರ್ಥವಾಗದ ಬರವಣಿಗೆಯನ್ನು ಬಳಸುವ ವಕೀಲರು ಮತ್ತು ಅಟಾರ್ನಿಗಳು ಅವರ ಪ್ಲೀಡಿಂಗುಗಳಲ್ಲಿ ಪ್ರಜೆಗಳ ಪರವಾಗಿ ಅಥವಾ ವಿರೋಧವಾಗಿ ಹೂಡುವ ದಾವೆಗಳು ಹಾಗೂ ಸಮನ್ ಮಾಡಿದ ವ್ಯಕ್ತಿಗಳಿಗೆ ಯಾವ ಕಾರಣದಿಂದ ದಾವೆ ಹೂಡಲಾಗಿದೆ ಎಂದು ಅರ್ಥವಾಗದಿರುವಲ್ಲಿ ತಿಳಿಯದ ಭಾಷೆಯನ್ನು ನ್ಯಾಯಾಲಯಗಳಲ್ಲಿ ಉಪಯೋಗಿಸುವದರಿಂದ ರಾಜ್ಯದ ಪ್ರಜೆಗಳಿಗೆ ಆಗಾಗ್ಯೆ ತೊಂದರೆಗಳು ಉಂಟಾಗುತ್ತವೆ. ಈ ತೊಂದರೆಗಳನ್ನು ನಿವಾರಿಸಲು ಮತ್ತು ತಿಳಿಯದ ಭಾಷೆಯಲ್ಲಿ ನ್ಯಾಯಾಲಯದಲ್ಲಿ ಕಾರ್ಯವಾಹಿಗಳನ್ನು ನಡೆಸುವದರಿಂದ ಸಿಲುಕಿಕೊಳ್ಳುವ ಅಪಾಯದಿಂದ ಗ್ರೇಟ ಬ್ರಿಟನ್ನಿನ ಒಂದು ಭಾಗವಾದ ಇಂಗ್ಲೆಂಡಿನ ಪ್ರಜೆಗಳನ್ನು ರಕ್ಷಸಲು ಒಂದು ಸಾವಿರದ ಮೂವತ್ತಮೂರನೆಯ ಮಾರ್ಚ್ ಇಪ್ಪತ್ತೆಂಟನೆಯ ದಿನದಿಂದ ಅಥವಾ ನಂತರ ಎಲ್ಲ ದಾವೆ, ಕಾರ್ಯವಿಧಾನ, ಪ್ಲೀಡಿಂಗುಗಳು, ನಿಯಮಗಳು, ಆದೇಶಗಳು, ದಸ್ತವೇಜುಗಳು, ತೀರ್ಪುಗಳು, ನಿಯಮಗಳು, ನಿಬಂಧನೆಗಳು ಮತ್ತು ಇಂಗ್ಲೆಂಡಿನ ಪರಿಮಿತಿಯಲ್ಲಿರುವ ಯಾವುದೇ ನ್ಯಾಯಾಲಯಗಳಲ್ಲಿ ಮತ್ತು ಸ್ಕಾಟಲೆಂಡಿನ ರಾಜ್ಯ ಶಾಸಕ ನ್ಯಾಯಾಲಯ ಮತ್ತು ನ್ಯಾಯದ ಕಾನೂನು ಮತ್ತು ಆಡಳಿತಕ್ಕೆ ಸಂಬಂಧಪಡುವಥಹ ಕಡೆಗಳಲ್ಲಿ ಇಂಗ್ಲೀಷ ಭಾಷೆಯೇ ಇರತಕ್ಕದ್ದು. ಮತ್ತು ಲ್ಯಾಟಿನ್, ಫ್ರೆಂಚ್ ಭಾಷೆಯಾಗಲಿ ಅಥವಾ ಇತರೆ ಯಾವುದೇ ಭಾಷೆಯಾಗಲಿ ಇರತಕ್ಕದ್ದಲ್ಲ ಮತ್ತು ಅವುಗಳನ್ನು ಸಂಸತ್ತಿನ ಅಧಿನಿಯಮಗಳನ್ನು ಬರೆಯುವಂಥ ಸುಂದರವಾದ, ಸ್ಪಷ್ಟವಾದ ಅಕ್ಷರಗಳಲ್ಲಿ ಬರೆಯತಕ್ಕದ್ದು. ನ್ಯಾಯಾಲಯವ ಬರವಣಿಗೆ ಎಂದು ಕರೆಯತಕ್ಕ ಬರವಣಿಗೆಯಲ್ಲಿರತಕ್ಕುದಲ್ಲ ಮತ್ತು ಈ ಅಧಿನಿಯಮಕ್ಕೆ ವಿರೋಧವಾಗಿ ನಡೆಯುವ ವ್ಯಕ್ತಿಗಳು

ಈ ಕಾರ್ಯಕ್ಕಾಗಿ ಯಾರು ದಾವೆ ಹೂಡುತ್ತಾರೋ ಆ ವ್ಯಕ್ತಿಗೆ ಅಂಥ ಪ್ರತಿಯೊಂದು ಅಪರಾಧಕ್ಕೂ ಐವತ್ತು ಪೌಂಡುಗಳ ದಂಡವನ್ನು ಸೀಡತಕ್ಕದ್ದು ಎಂದು ಅಧಿನಿಯಮಗೊಳಿಸಲಾಗಿದೆ. (ಆಂಗ್ಲರ ಆಡಳಿತದಲ್ಲಿ ಕನ್ನಡ ಪು. ೫೨೦)

ಇಂಥ ಬಿಗಿ ಕ್ರಮವನ್ನು ಕೈಕೊಂಡರೂ ಅನೇಕ ಶತಮಾನ ಲ್ಯಾಟಿನ್ ಇಂಗ್ಲೆಂಡಿನಲ್ಲಿಯ ತನ್ನ ಹಿಡಿತವನ್ನು ಉಳಿಸಿಕೊಂಡು ಬಂದಿರುವದನ್ನು ಬೇಕನ್ನನ ಮನೋಭಿಲಾಷಿಕೆಯಿಂದ ಕಂಡುಕೊಳ್ಳಬಹುದು. ಆಂಗ್ಲ ಸಾಮ್ರಾಜ್ಯ ವಿಸ್ತಾರವಾಗುತ್ತ ನಡೆದಂತೆ ಅವರ ಭಾಷೆಯು ಸಹ ಭದ್ರವಾಗಿ ನೆಲಗೊಳ್ಳುತ್ತಾ ಅನೇಕ ಲ್ಯಾಟಿನ್ ಪದಗಳನ್ನು ತನ್ನ ಮಡಿಲಲ್ಲಿ ತುಂಬಿಕೊಂಡು ಶ್ರೀಮಂತ ಭಾಷೆಯಾಗಿ ನೆಲೆಯೂರಿತು. ಯಾವುದೇ ಬಿಗಿ ಕ್ರಮವಿಲ್ಲದೆ ಕನ್ನಡ ನ್ಯಾಯಾಲಯದಲ್ಲಿ ಭದ್ರವಾಗಿ ನೆಲೆಯೂರಲಾರದು. ದುರ್ದೈವದ ಮಾತೆಂದರೆ ೧೮೩೦ರಿಂದ ಸುಮಾರು ೧೯೫೬ರ ನವೆಂಬರ ೧ರ ವರೆಗೆ ಅಂದರೆ ಉತ್ತರ ಕರ್ನಾಟಕ ಅಂದಿನ ಹಳೆಯ ಮೈಸೂರಿನಲ್ಲಿ ಸೇರ್ಪಡೆಯಾಗುವವರೆಗೆ ಈ ಭಾಗದ ನ್ಯಾಯಾಲಗಳ ಭಾಷೆ ತಾಲೂಕಾ ಮಟ್ಟದ ನ್ಯಾಯಾಲಯಗಳಿಂದ ಹಿಡಿದು ಜಿಲ್ಲಾ ಮಟ್ಟದ ನ್ಯಾಯಾಲಯಗಳವರೆಗೆ ಕನ್ನಡ ವಾಗಿರುವದು ಗಮನಾರ್ಹ. ಜಿಲ್ಲಾ ನ್ಯಾಯಾಲಯಗಳಲ್ಲಿಯ ನ್ಯಾಯಾಧೀಶರು ಬ್ರಿಟಿಶರಾಗಿದ್ದರೂ ನ್ಯಾಯಾಲಯದ ಭಾಷೆಕನ್ನಡವಾಗಿಯೇ ಮುಂದುವರಿದು ಬಂದಿತು. ಮುನಸಿಫ್ ಕೋರ್ಟುಗಳಲ್ಲಿ ಸಿವ್ಹಿಲ್ ಕೋರ್ಟುಗಳಲ್ಲಿ ದಂಡಾಧಿಕಾರಿಗಳ ಕೋರ್ಟುಗಳಲ್ಲಿ ಸತ್ರ ನ್ಯಾಯಾಲಯಗಳಲ್ಲಿ, ಅಂದರೆ ಸೆಶನ್ಸ ಕೋರ್ಟಿನಲ್ಲಿಯ ಭಾಷೆ ಮುಂಬೈ ಸರಕಾರದ ಆದೇಶದನ್ವಯ ಕನ್ನಡವೇ ಆಗಿದ್ದಿತು. ಸಾಕ್ಷಿಗಳ ಜಬಾನಿ ಅಸಲರ್ಜಿ, ಕೈಪಿಯತ್ತ ಹಾಗೂ ಇತರೇ ಯಾವುದೇ ಅರ್ಜಿಗಳು ಕನ್ನಡದಲ್ಲಿಯೇ ಇರುವದನ್ನೂ ಕಾಣುತ್ತೇವೆ ಅಷ್ಟೇ ಅಲ್ಲ ಠರಾವುಗಳೂ ಕನ್ನಡದಲ್ಲಿ ಇವೆ. ಸೆಶನ್ಸ ಕೋರ್ಟಿನಲ್ಲಿ ಕನ್ನಡ ಜವಾಬಿನ ಜೊತೆಗೆ ಇಂಗ್ಲೀಷಿನಲ್ಲಿ ಜಬಾನಿ ಆಂಗ್ಲನ್ಯಾಯಾಧೀಶರ ಅನುಕೂಲತೆಗೆ ಬರೆದುಕೊಂಡರೂ ಅವು ಇಂಗ್ಲಿಷ ಟಿಪ್ಪಣಿಗಳೆಂದು ಪರಿಗಣಿತವಾಗುತ್ತಿದ್ದವು. ಒಂದು ವೇಳೆ ಕನ್ನಡ ಜಬಾನಿ ಮತ್ತು ಇಂಗ್ಲೀಷ ಟಿಪ್ಪಣಿಗಳ ನಡುವೆ ಅರ್ಥ ವ್ಯತ್ಯಾಸ ಬಂದರೆ, ಕನ್ನಡ ಜವಾಬು ಅಧಿಕೃತವೆಂದು ತಿಳಿಯಲಾಗುತ್ತಿತ್ತು. ಯಾಕೆಂದರೆ ಅಂಥ ಜವಾಬಿನ ಸಾಕ್ಷಿದಾರನಿಗೆ ತಿಳಿಯುವ ಭಾಷೆಯಲ್ಲಿ ಇರುವದರಿಂದ ಅವನ ಹೇಳಿಕೆಯನ್ನೂ ಅವನು ಹೇಳಿದ ಹಾಗೆಯೇ ಬರೆದುಕೊಂಡರೆ ಪುನಃ ಅವನಿಗೆ ಓದಿ ಹೇಳುತ್ತಿದ್ದುದರಿಂದ ಅದು ಅಧಿಕೃತವೆಂದು ತಿಳಿದು ಅದಕ್ಕೆ ಪ್ರಾಧಾನ್ಯತೆ ಕೊಡಲಾಗುತ್ತಿತ್ತು.

ಆದರೆ, ರಾಜ್ಯ ಪುನರ್ವಿಂಗಡಣೆಯಾದ ನಂತರ ದುರ್ದೈವದಿಂದ ಎಲ್ಲ ನ್ಯಾಯಾಲಯಗಳ ಭಾಷೆ ಇಂಗ್ಲೀಷಾಗಿ ಮಾರ್ಪಟ್ಟಿತು. ಕನ್ನಡ ಅಭಿಮಾನಿಗಳ ಹೋರಾಟದಿಂದ ಈಗ, ಮುನಸಿಫ ಮತ್ತು ದಂಡಾಧಿಕಾರಿಗಳ ನ್ಯಾಯಾಲಯಗಳ ಮಟ್ಟಿಗೆ ಪುನಃ ಕನ್ನಡ ಅನುಷ್ಠಾನಕ್ಕೆ ಬಂದಿದೆ. ಆದರೆ ಅಲ್ಲೂ ಕೂಡ ಕನ್ನಡದಲ್ಲಿ ಠರಾವುಗಳನ್ನು ಬರೆಯುವ ನ್ಯಾಯಾಧೀಶರ ಸಂಖ್ಯೆ ಬರಳೆಣಿಕೆಯಷ್ಟು ಮಾತ್ರವಿದೆ. ಇಂದಿಗೂ ಜಿಲ್ಲೆ ಮತ್ತು ಸತ್ರ ನ್ಯಾಯಾಲಯದ ಭಾಷೆ, ಇಂಗ್ಲೀಷ ಭಾಷೆ ಇದೆ. ಇದು ಗಂಭೀರವಾಗಿ ಪರಿಗಣಿಸಬೇಕಾದ ವಿಷಯ. ಕನ್ನಡ ಭಾಷೆಯ ಗಡಿಯಾರವನ್ನು ನಾವೇ ಒಂದು ನೂರಾ ಅರವತ್ತೈದು ವರ್ಷ ಹಿಂದೆ ಸರಿಸಿದ್ದೇವೆ. ಕನ್ನಡದ ಹುಲಿಗಳ ಹೋರಾಟ,

ಕನ್ನಡ ಕಾವಲು ಸಮಿತಿಗಳ ಸತತ ಪ್ರಯತ್ನ ನಡೆದಿದ್ದರೂ ಇಂದಿನವರೆಗೆ ಜಿಲ್ಲೆ ಮಟ್ಟದ ನ್ಯಾಯಾಲಯಗಳಲ್ಲಿ ಕನ್ನಡವನ್ನು ಬಳಕೆಯಲ್ಲಿ ತರಲು ಅಸಮರ್ಥವಾಗಿದೆ. ಹೀಗೇಕಾಯಿತು? ಕನ್ನಡಿಗರಾದ ನಾವು ಇದೀಗ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು. ನಮ್ಮ ಕನ್ನಡದ ಹೋರಾಟ ಕೇವಲ ಹೋರಾಟಕ್ಕಾಗಿ ಹೋರಾಟವಾಗಿದೆಯೇ ಅಥವಾ ಪ್ರಾಮಾಣಿಕ ಪ್ರಯತ್ನ ಈ ದಿಸೆಯಲ್ಲಿ ನಡೆದಿದೆಯೇ ಎಂಬುದರ ವಿಮರ್ಶೆಗಿಂತ ಕನ್ನಡವನ್ನೂ ನ್ಯಾಯಾಲಯದ ಅದರಲ್ಲೂ ಜಿಲ್ಲೆ ಮತ್ತು ಸೆಶನ್ಸ ನ್ಯಾಯಾಲಯದ ಮತ್ತು ಉಚ್ಚನ್ಯಾಯಾಲಯದ ಮಟ್ಟದಲ್ಲಿ ಅನುಷ್ಠಾನಕ್ಕೆ ತರುವ ಸಾಧ್ಯತೆ ಮತ್ತು ಅದರಲ್ಲಿರುವ ತೊಡರುಗಳ ಬಗೆಗೆ ವಿಚಾರಿಸೋಣ.

೩. ಇಂದಿನ ನ್ಯಾಯಾಲಯಗಳು ಮತ್ತು ಕನ್ನಡ

ನ್ಯಾಯಾಲಯಗಳನ್ನು ಏರಡು ರೀತಿಯಿಂದ ವಿಂಗಡಿಸಬಹುದು. ಮೊದಲನೆಯದಾಗಿ ನ್ಯಾಯಿಕ (ಜುಡಿಸಿಯಲ್) ಎರಡನೆಯದಾಗಿ ಕಾರ್ಯನಿರ್ವಾಹಕ (executive) ನ್ಯಾಯಾಲಯಗಳು. ಈ ಏರಡು ಪದ್ಧತಿಯ ನ್ಯಾಯಾಲಯಗಳ ಕಾರ್ಯ ವ್ಯಾಪ್ತಿ ಅತಿ ಸ್ವಲ್ಪ ಅಂದರೆ ಅಪರಾಧಗಳನ್ನು ತಡೆಯುವಲ್ಲಿ ತೆಗೆದು ಕೊಳ್ಳಬಹುದಾದ ಅಧಿಕಾರದ ಬಗೆಗೆ, ಮತ್ತು ಆಂತರಿಕ ಶಾಂತಿಯನ್ನು ಕಾಯ್ದುಕೊಳ್ಳಲು ತೆಗೆದುಕೊಳ್ಳಬೇಕಾದ ಪರಿಮಿತ ಅಧಿಕಾರ ಚಲಾಯಿಸುವ ಮಟ್ಟಿಗೆ ಮಾತ್ರ ಸೀಮಿತವಾಗಿರುವದರಿಂದ ಈ ನ್ಯಾಯಾಲಯಗಳಲ್ಲಿ ಈಗಾಗಲೇ ಕನ್ನಡವೇ ಅಡಳಿತ ಭಾಷೆಯಾಗಿರುವದರಿಂದ ಇಲ್ಲಿ ಕನ್ನಡ ಭಾಷೆಯ ಅನುಷ್ಠಾನದ ಸಮಸ್ಯೆ ಉದ್ಭವಿಸುವದಿಲ್ಲ.

ಇನ್ನು ಮೊದಲಸೆಯ ವರ್ಗದ ನ್ಯಾಯಾಲಯಗಳನ್ನು ದಿವಾನಿ ಹಾಗೂ ಫೌಜದಾರಿ ನ್ಯಾಯಾಲಯಗಳೆಂದು ವಿಂಗಡಿಸಬಹುದು. ದಿವಾನಿ ನ್ಯಾಯಾಲಗಳಲ್ಲಿ ಅತಿ ಕೆಳಸ್ತರದಲ್ಲಿ ಮುನಿಸಿಫ್ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತವೆ. ಇಲ್ಲಿ ಈಗಾಗಲೇ ಕನ್ನಡದಲ್ಲಿಯೇ ಕಾರ್ಯಕಲಾಪಗಳು ನಡೆಯುತ್ತಲಿವೆ. ಅದರಂತೆ ಅವುಗಳ ಮೇಲಿನ ದಿವಾನಿ ಜಚ್ ಕೋರ್ಟಗಳಲ್ಲಿಯೂ ಕಾರ್ಯಕಲಾಪ ಕನ್ನಡದಲ್ಲಿಯೇ ನಡೆಯುತ್ತಲಿದೆ. ಅದರಂತೆ ಫೌಜದಾರಿ ನ್ಯಾಯಾಲಯಗಳಲ್ಲಿ ಕೆಳಸ್ತರದಲ್ಲಿ ನ್ಯಾಯಿಕ ದಂಡಾಧಿಕಾರಿಗಳು (ಜ್ಯುಡಿಸಿಯಲ್ ಮ್ಯಾಜಿಸ್ಟ್ರೇಟ) ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಗಳ ಕಾರ್ಯಕಲಾಪ ಕನ್ನಡದಲ್ಲಿಯೇ ನಡೆಯುತ್ತದೆ. ಆದರೆ ಕನ್ನಡದಲ್ಲಿ ತೀರ್ಪುಕೊಡುವ ದಂಡಾಧಿಕಾರಗಳು ಈ ಮೊದಲು ಹೇಳಿದಂತೆ, ವಿರಳ. ಈ ದಂಡಾಧಿಕಾರಿಗಳ ನ್ಯಾಯಾಲಯಗಳ ಕಾರ್ಯ ಕಲಾಪಗಳ ಬಗ್ಗೆ ದಂಡ ಪ್ರಕ್ರಿಯೆ ಸಂಹಿತ. (ಕ್ರಿಮಿನಲ್ ಪ್ರೊಸೀಜರ ಕೋಡ) ಏನು ಹೇಳುತ್ತದೆ ಎಂಬುದನ್ನು ವಿಚಾರಿಸೋಣ.

ದಂಡ ಪ್ರಕ್ರಿಯೆಯ ೨೭೨ನೇಯ ವಿಧಿ ಅನ್ವಯ ರಾಜ್ಯ ಸರಕಾರವು ತನ್ನ ರಾಜ್ಯದಲ್ಲಿರುವ ಪ್ರತಿಯೊಂದು ಫೌಜದಾರಿ ನ್ಯಾಯಾಲಯದ ಭಾಷೆ ಯಾವುದೆಂಬುದನ್ನು ನಿರ್ಣಯಿಸುವ ಅಧಿಕಾರವನ್ನು ಹೊಂದಿರುತ್ತದೆ. ಆದರೆ ಉಚ್ಚನ್ಯಾಯಾಲಗಳ ಭಾಷೆಯ ಬಗೆಗೆ ಅಂಥ ನಿರ್ಣಯ

ತೆಗೆದುಕೊಳ್ಳಲು ರಾಜ್ಯ ಸರಕಾರಕ್ಕೆ ಅಧಿಕಾರವಿಲ್ಲ. [Sec. 272 of Cr.P.C. – The state government may determine what shall be for pupose of this code, the language of each Court within the state other than the high Court]

ಇದರಂತೆಯೇ ಸಮರಿ ಕೇಸುಗಳಲ್ಲಿಯ ಕಾಗದ ಪತ್ರ ಮತ್ತು ಠರಾವುಗಳು ನ್ಯಾಯಾಲಯಗಳ ಭಾಷೆಯಲ್ಲಿಯೇ ಇರತಕ್ಕದ್ದೆಂದು ದಂತ ಪ್ರಕ್ರಿಯೆ ಸಂಹಿತೆಯ ೨೬೫(೧) ವಿಧಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಫೌಜದಾರಿ ಮೊಕದ್ದಮೆಗಳಲ್ಲಿ ನ್ಯಾಯಾಲಯಗಳು ಬಳಸುವ ಭಾಷೆಯ ಬಗೆಗೆ ರಾಜ್ಯ ಸರಕಾರ ಕನ್ನಡವನ್ನು ಜಾರಿಗೊಳಿಸಲು ಆಜ್ಞೆ ಹೊರಡಿಸಲು ಅಧಿಕಾರ ಹೊಂದಿದೆ. ಅಲ್ಲದೆ ಇದೇ ಸಂಹಿತೆಯ ೨೭೭ ನೆಯ ವಿಧಿ ಅನ್ವಯ ಸೆಶನ್ಸ ನ್ಯಾಯಾಲಯದ ಕಾರ್ಯ ಕಲಾಪಗಳನ್ನು ಹಾಗೂ ಸಾಕ್ಷಿಗಳ ಹೇಳಿಕೆಗಳು ಆ ನ್ಯಾಯಾಲಯದ ಅಧಿಕೃತ ಭಾಷೆಯಲ್ಲಿ ಇದ್ದರೆ ಅದೇ ಭಾಷೆಯಲ್ಲಿ ತೆಗೆದುಕೊಳ್ಳತಕ್ಕದ್ದೆಂದು ಸ್ಪಷ್ಟವಾಗಿ ಆಜ್ಞಾಪಿಸಲಾಗಿದೆ. ಇಲ್ಲಿ ಯಾವುದೇ ರಿಯಾಯತಿಯನ್ನು ೨೭೭ ವಿಧಿ ತೋರಿಸಿಲ್ಲ. ಒಂದು ವೇಳೆ ಸಾಕ್ಷಿದಾರನಿಗೆ ನ್ಯಾಯಾಲಯದ ಅಧಿಕೃತ ಭಾಷೆ ಬರದೇ ಇದ್ದಲ್ಲಿ ಸಾಧ್ಯವಾದ ಮಟ್ಟಿಗೆ ಅವನ ಭಾಷೆಯಲ್ಲಿಯೇ ಹೇಳಿಕೆ ಪಡೆದುಕೊಂಡು ಅದನ್ನು ನ್ಯಾಯಾಲಯದ ಅಧಿಕೃತ ಭಾಷೆಯಲ್ಲಿ ಭಾಷಾಂತರಿಸಬೇಕು. ಮತ್ತು ಅಂಥ ಭಾಷಾಂತರದ ಪ್ರತಿಗೆ ನ್ಯಾಯಾಧೀಶರು ಸಹಿಮಾಡಬೇಕೆಂದು ಹೇಳಲಾಗಿದೆ.

ಒಂದು ವೇಳೆ ನ್ಯಾಯಾಲಯದ ಅಧಿಕೃತ ಭಾಷೆಯಲ್ಲದೆ ಇಂಗ್ಲೀಷದಲ್ಲಿಯೆ ಸಾಕ್ಷಿದಾರನ ಹೇಳಿಕೆ ಪಡೆದಿದ್ದಿರೆ ಅದರ ಆ ಕೋರ್ಟಿನ ಭಾಷೆಗೆ ಭಾಷಾಂತರಿಸಿ ಅದರ ಪ್ರತಿಯನ್ನು ಪಕ್ಷಕಾರನು ಇಚ್ಛಿಸದೆ ಇದ್ದಲ್ಲಿ ಇಡದೆ ಇರುವ ಅವಕಾಶ ಕಲ್ಪಿಸಲಾಗಿದೆ.

ಇದೇ ಸಂಹಿತೆಯ ೨೭೯(೧) ವಿಧಿ ಅನ್ವಯ ಒಂದು ವೇಳೆ ಆರೋಪಿತನಿಗೆ ತಿಳಿಯದ ಭಾಷೆಯಲ್ಲಿ ಸಾಕ್ಷಿ ತೆಗೆದುಕೊಂಡಿದ್ದರೆ, ಅಂಥ ಆಪಾದಿತನಿಗೆ ಅವನಿಗೆ ತಿಳಿಯುವ ಭಾಷೆಯಲ್ಲಿ ನ್ಯಾಯಾಧೀಶರು ತೆರೆದ ನ್ಯಾಯಾಲಯದಲ್ಲಿ ಭಾಷಾಂತರಿಸಿ ಹೇಳಬೇಕಾಗುತ್ತದೆ.

ನ್ಯಾಯಾಧೀಶರಿಗೆ ಸಾಕ್ಷಿದಾರನಿಗೆ ಗೊತ್ತಿರುವ ಭಾಷೆ ತಿಳಿಯದೆ ಇದ್ದರೆ, ಆ ಉಭಯ ಭಾಷಾ ಪ್ರವೀಣರನ್ನು ಭಾಷಾಂತರಕಾರರಾಗಿ ಇಟ್ಟುಕೊಳ್ಳುವ ಸೌಲಭ್ಯವಿದೆ. ಆದರೆ ಅಂಥ ಭಾಷಾಂತರಕಾರರು ಮೊದಲೆ ಸರಿಯಾದ ಭಾಷಾಂತರವನ್ನೇ ತಾವು ಮಾಡುವುದಾಗಿ ಪ್ರಮಾಣ ಸ್ವೀಕರಿಸಿ ಭಾಷಾಂತರದ ಕಾರ್ಯ ನಿರ್ವಹಿಸಬೇಕಾಗುತ್ತದೆ.

ರಾಜ್ಯ ಸರಕಾರಗಳು ತಮ್ಮ ರಾಜ್ಯದ ಅಧಿಕೃತ ಭಾಷೆಯನ್ನು ಉಚ್ಚನ್ಯಾಯಾಲಯಗಳಲ್ಲಿ ಕಡ್ಡಾಯಗೊಳಿಸಲು ಸಾಧ್ಯವಿದ್ದಿದ್ದರೂ, ಇಲ್ಲಿ ದಂಡ ಪ್ರಕ್ರಿಯ ಸಂಹಿತೆಯ ೨೮೬ನೇ ವಿಧಿ ಗಮನಾರ್ಹವಾಗಿದೆ. ಅದರನ್ವಯ ಪ್ರತಿಯೊಂದು ಉಚ್ಚನ್ಯಾಯಾಲಯವು ತನ್ನ ಮುಂದೆ ಸಾಕ್ಷಿದಾರನು ಯಾವ ರೀತಿ ಸಾಕ್ಷಿಕೊಡಬೇಕು ಮತ್ತು ಆರೋಪಿಯ ಜವಾಬು ಹೇಗೆ ತೆಗೆದುಕೊಳ್ಳಬೇಕೆಂಬುದರ ಬಗೆಗೆ ಕಟ್ಟಳೆಮಾಡಬಹುದಾಗಿದೆ. ಈ ರೀತಿ ಉಚ್ಚನ್ಯಾಯಾಲಯ ತನ್ನ ಭಾಷಾ ನೀತಿಯನ್ನು ತನಗೆ ಬೇಕಾದಂತೆ ರೂಢಿಸುವ ಅಧಿಕಾರವನ್ನು ಈ ಸಂಹಿತೆಯ ೨೮೬ನೇ ವಿಧಿ ಕೊಡಮಾಡಿರುವದು ಗಮನಿಸಬೇಕಾದ ಮುಖ್ಯವಾದ ಅಂಶವಾಗಿದೆ.

ಇದೇ ಸಂಹಿತೆಯ ೩೫೪ನೇಯ ವಿಧಿಯು ಫೌಜದಾರಿ ನ್ಯಾಯಾಲಯಗಳ ತರಾವಿನ ಭಾಷೆಯ ಬಗೆಗೆ ಸಂಬಂಧಿಸಿದ್ದಾಗಿದೆ. ಈ ವಿಧಿ ಅನ್ವಯ ಇಂಥ ತರಾವು ಆ ನ್ಯಾಯಾಲಯದ ಅಧಿಕೃತ ಭಾಷೆಯಲ್ಲಿ ಇರುವದು ಅವಶ್ಯವಿದೆ. (Every Judgement shall be written in the language of the court)

ಈ ರೀತಿ ಸ್ಪಷ್ಟ ನಿರ್ದೇಶನವಿದ್ದರೂ ಇದುವರೆಗೆ ಕೆಳವರ್ಗದ ನ್ಯಾಯಾಧೀಶರಲ್ಲಿ ಬಹಳಷ್ಟು ನ್ಯಾಯಾಧೀಶರು ಕನ್ನಡಗರೇ ಇದ್ದು ತಮ್ಮ ನ್ಯಾಯಾಲಯಗಳ ಭಾಷೆ ಕನ್ನಡವಾಗಿದ್ದರೂ ಯಾಕೆ ತರಾವುಗಳನ್ನು ಇನ್ನೂ ಕನ್ನಡದಲ್ಲಿ ಬರೆಯುತ್ತಿಲ್ಲವೋ ತಿಳಿಯದಾಗಿದೆ. ರಾಜ್ಯ ಸರಕಾರವೇನೋ ಕನ್ನಡದಲ್ಲಿ ತರಾವು ಬರೆಯುವ ನ್ಯಾಯಾಧೀಶರಿಗೆ ಬಹುಮಾನಕೊಡುವ ಯೋಜನೆ ಹಾಕಿಕೊಂಡಿದೆ. ಆದರೆ ಈ ಮೇಲೆ ಹೇಳಿದಂತೆ ಅವರು ಕನ್ನದಲ್ಲಿಯೇ ಕಡ್ಡಾಯವಾಗಿ ತರಾವು ಕೊಡುವ ಅವಶ್ಯಕತೆಯಿದ್ದರೂ, ಈ ಪ್ರೋತ್ಸಾಹದಾಯಕ ಪ್ರವೃತ್ತಿಯ ಅವಶ್ಯಕತೆಯಾದರು ಏಕೆ ಬೇಕೋ ತಿಳಿಯುತ್ತಿಲ್ಲ. ಇಲ್ಲಿ ಉಪಯೋಗಿಸಿದ ಪದ 'ಅವಶ್ಯಕವಾಗಿ ಬರೆಯಬೇಕು' (shall write) ಎಂದಿದೆಯೇ ವಿನಹ 'ಬರೆಯಬಹುದು.' (may write) ಎಂದಿರುವದಿಲ್ಲ. ಹೀಗಾಗಿ ನಮ್ಮ ರಾಜ್ಯ ಸರಕಾರದ ಭಾಷಾ ನೀತಿಯೇ ಗೊಂದಲಮಯವಾಗಿದೆ. ಈ ಮಾತಿಗೆ ನಿದರ್ಶನವೆಂದರೆ ಸೆಶನ್ಸ ನ್ಯಾಯಾಲಯದ ಭಾಷೆ ಅತಿ ಹಿಂದಿನಿಂದಲೇ ಕನ್ನಡವಾಗಿ ೧೯೫೬ರವರೆಗೆ ಇದ್ದು ಅದು ರಾಜ್ಯ ಪುರರಚನೆಯ ನಂತರ ಇಂಗ್ಲೀಷಾಗಿ ಇಂದಿಗೂ ಇಂಗ್ಲೀಷಿನಲ್ಲಿಯೇ ಮುಂದುವರಿದಿದ್ದನ್ನು ಉದಾಹರಿಸಬಹುದು. ೧೯೫೬ರ ಪೂರ್ವದ ಜಿಲ್ಲಾಮಟ್ಟದ ನ್ಯಾಯ್ಯಾಲಯಗಳು ಕನ್ನಡದಲ್ಲಿಯೇ ಕಾರ್ಯಕಲಾಪ ನಡೆಸಲು ಸಾಧ್ಯವಿದ್ದರೆ ಇಂದೇಕೆ ಸಾಧ್ಯವಾಗುತ್ತಿಲ್ಲ? ಅಂದೂ ತೀರ್ಪುಗಳು ಇಂಗ್ಲೀಷ ಭಾಷೆಯಲ್ಲಿ ಇರುತ್ತಿದ್ದುದನ್ನು ಯಾರಿಂದಲೂ ಎತ್ತಿ ತೋರಿಸಬಹುದು. ಆದರೆ ಕೊನೆಯ ವರ್ಷ ನ್ಯಾಯಾಲಯ ಇತರೇ ಕಾರ್ಯಕಲಾಪವನ್ನು ಉದಾಹರಣೆಗೆ ಸಾಕ್ಷಿಗಳ ಹೇಳಿಕೆಗಳನ್ನು ಕನ್ನಡದಲ್ಲಿಯೇ ಬರೆದುಕೋಳ್ಳಲು ಇರುವ ತೊಂದರೆಯೇನೋ ತಿಳಿಯುತ್ತಿಲ್ಲ.

೧೯೭೩ರಲ್ಲಿ ಅಮಲಿನಲ್ಲಿ ಬಂದು ಪ್ರಕ್ರಿಯೆಸಂಹಿತೆಯನ್ವಯ ಕೊನೆಯ ಪಕ್ಷ ಜಿಲ್ಲಾ ಮಟ್ಟದ ಎಲ್ಲ ಫೌಜದಾರ ನ್ಯಾಯಾಲಯಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಉಪಯೋಗಿಸಲು ಅಧಿಕೃತವಾಗಿ ಕ್ರಮ ಕೈಕೊಳ್ಳಲು ಸರಕಾರಕ್ಕೆ ಸಾಧ್ಯವಾದರೂ ಅಂಥ ಕ್ರಮ ಕೈಕೊಳ್ಳಲು ಹಿಂದೆ ಹಾಕುತ್ತಿರುವುದಾದರೂ ಏಕೆಂಬುದು ಅರ್ಥವಾಗುತ್ತಿಲ್ಲ. ಕರ್ನಾಟಕ ಸರಕಾರ ಡಿ.ಪಿ.ಎ.ಆರ್ ೧ ಎ.ಪಿ.ಎಲ್ ೭೯ ದಿನಾಂಕ ೬-೯-೯೩ ರನ್ವಯ ರಾಜ್ಯ ಭಾಷಾ ವರ್ಷದ ಅಚರಣೆಯ ಅಂಗವಾಗಿ ತೆಗೆದುಕೊಳ್ಳಬೇಕಾದ ಕ್ರಮಗಳಲ್ಲಿ ನ್ಯಾಯಾಂಗಕ್ಕೆ ಸಂಬಂಧಿಸಿದ ಕೆಳಗಿನ ಉಲ್ಲೇಖ ಅಂದರೆ. ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಅಧೀನ ನ್ಯಾಯಾಲಯಗಳಲ್ಲಿ ಸಿಬ್ಬಂದಿ ವರ್ಗದ ಆಡಳಿತಕ್ಕೆ ಸಂಬಧಿಸಿದ ದೈನಂದಿಕ ರಜೆ ಮಂಜೂರಾತಿ, ಮುಂಬಡತಿ, ವರ್ಗಾವಣೆ ಮುಂತಾದ ಸಣ್ಣ ಪುಟ್ಟ ಆದೇಶಗಳನ್ನು ಹೆಚ್ಚು ಹೆಚ್ಚಾಗಿ ಕನ್ನಡದಲ್ಲಿ ಹೊರಡಿಸುವಂತೆ ಅವರನ್ನು ಪ್ರಾರ್ಥಿಸುವದು. ಅವರ ವಿಳಾಸ ನಮೂನೆಗಳ, ದಸ್ತವೇಜುಗಳು (ರಜಿಸ್ಟರಗಳು) ಕಚೇರಿ ಮೊಹರುಗಳು ದ್ವಿಭಾಷೆಯಲ್ಲಿ ಅಚ್ಚು ಹಾಕಿಸುವಂತೆ ಸಂಬಂಧಪಟ್ಟವರನ್ನು ಕೋರಿರುವದು.

ಸರಕಾರ ನ್ಯಾಯಾಲಯಗಳ ವಿಷಯವಾಗಿ ಇನ್ನೂ ಕೋರಿಕೆಯ ಮಟ್ಟದಲ್ಲಿಯೇ ವ್ಯವಹರಿಸುತ್ತಿದ್ದರೆ, ಜಿಲ್ಲಾಮಟ್ಟದ ನ್ಯಾಯಾಲಯಗಳ ವ್ಯವಹಾರ ಅಧಿಕೃತವಾಗಿ ಬಳಕೆಯಲ್ಲಿ ಬರಲು ಇನ್ನೆಷ್ಟು ಸಮಯ ಬೇಕಾದೀತೆಂಬುದನ್ನು ಭವಿಷ್ಯಕಾರರು ಮಾತ್ರಹೇಳಬಲ್ಲರು ! ಯಾಕೆಂದರೆ ೩೧-೧೦-೮೫ರ ಅಧಿಕೃತ ಜ್ಞಾಪನ ಪತ್ರವು ನ್ಯಾಯಾಲಯದ ಭಾಷೆಯ ಬಗೆಗೆ ಮೌನತಾಳಿದೆ. ಅಲ್ಲದೆ ೪-೩-೮೦ರ ಕರ್ನಾಟಕ ಸರಕಾರದ ಅಧಿಸೂಚನೆ ಸಹ ಗ್ರಾಮ ನ್ಯಾಯಾಲಯಗಳನ್ನು ಹೊರತು ಪಡಿಸಿ ಇತರ ನ್ಯಾಯಾಲಯಗಳಿಗೆ ಕಳುಹಿಸುವ ಪತ್ರವ್ಯವಹಾರದಲ್ಲಿ ಇಂಗ್ಲೀಷ ಬಳಕೆಯನ್ನು ಮುಂದುವರಿಸಬಹುದೆಂದು ಸಾರಿದ್ದಾರೆ.

ಹೀಗೆ ನ್ಯಾಯಾಲಯಗಳ ಕಾರ್ಯಕಲಾಪ ಕನ್ನಡದಲ್ಲಿ ಕಡ್ಡಾಯಗೊಳಿಸುವ ದಿಸೆಯಲ್ಲಿ ನ್ಯಾಯಿಕ ದಂಡಾಧಿಕಾರಗಳಿಗೆ ಮೇಲ್ಮಟ್ಟದ ನ್ಯಾಯಾಲಯಗಳ ವಿಷಯವಾಗಿ ಸರಕಾರವೇ ತನಗೆ ದೊರೆತ ದಂಡ ಪ್ರಕ್ರಿಯೆ ಸಂಹಿತೆಯನ್ವಯ ಅಧಿಕಾರವನ್ನು ಚಲಾಯಿಸಲು ಹಿಂದೇಟು ಹಾಕುತ್ತಿದ್ದರೆ ಯಾರು ತಾನೆ ಏನು ಮಾಡಲು ಸಾಧ್ಯ.? ಸರಕಾರದ ಕಾವಲು ಸಮಿತಿ ಅಥವಾ ಇನ್ನಾವುದೇ ಇಂಥ ಸಮಿತಿಗಳು, ಕನ್ನಡ ಉಪಯೋಗದ ಬಗೆಗೆ ಉಗ್ರವಾಗಿ ಮಾತಾಡಿದ ಮಾತ್ರಕ್ಕೆ ಜಿಲ್ಲಾ ಮಟ್ಟದ ನ್ಯಾಯಾಲಯಗಳಲ್ಲಿ ಕನ್ನಡದಲ್ಲಿ ಕಾರ್ಯಕಲಾಪಗಳು ನಡೆಯುವವೆಂದು ಯಾರಾದರೂ ಭಾವಿಸಿದರೆ ಅದು ಕೇವಲ ಆಸೆಯಾದೀತೆ ವಿನಾ ವಾಸ್ತವಿಕತೆ ಆಗಲಾರದು. ನ್ಯಾಯಾಲಯದ ಕಾರ್ಯಕಲಾಪಗಳಲ್ಲಾಗಲೀ ಅಥವಾ ಅವುಗಳ ತೀರ್ಪು ಕನ್ನಡದಲ್ಲಿ ಬರಲು ಇರುವ ತೊಂದರೆಗಳೇನಾದರೂ ಇದೆಯೇ ಎಂಬ ಬಗೆಗೆ ವಿಚಾರಿಸೋಣ.

ನನಗನಿಸುಮಟ್ಟಿಗೆ ಮೂಲ ತೊಂದರೆಯೆಂದರೆ, ಸಂಬಂಧಪಟ್ಟವರ ವಿಚಿತ್ರ ಮನೋಭೂಮಿಕೆಯೇ ಕಾರಣವೆನಿಸುತ್ತದೆ. ನ್ಯಾಯಾಲಯಗಳು ಒಂದು ರೀತಿಯ ಸಂಪ್ರದಾಯಿಕ ಮನೋವೃತ್ತಿಯ ಒಂದೇ ಜಾಡಿನಲ್ಲಿ ಬೆಳೆದುಬಂದಿದೆ. ದಿಡೀರ ಬದಲಾವಣೆ ಅವುಗಳಿಗೆ ಅಪಥ್ಯ. ಇದನ್ನು ಬೇಕಾದರೆ ಸಂಪ್ರದಾಯವಾದಿತ್ವ (Conservatism) ಎಂದಾದರೂ ಕರೆಯಬಹುದು.

ಎರಡನೆಯದಾಗಿ, ಕಾನೂನು ಶಿಕ್ಷಣ ಹೆಚ್ಚಾಗಿ ಆಂಗ್ಲ ಭಾಷೆಯಲ್ಲಿ ನಡೆಯುತ್ತಿದೆ. ಕಾನೂನು ಕಾಲೇಜಿನಲ್ಲಿ ಕನ್ನಡದಲ್ಲಿ ಕಾನೂನ ಶಿಕ್ಷಣ ಕೊಡಲು ಮತ್ತು ಕಾನೂನು ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತರಿಸಲು ಸಾಧ್ಯವಿದ್ದರೂ, ಇಂದಿಗೂ ಕಾನೂನು ಮಹಾವಿದ್ಯಾಲಯಗಳಲ್ಲಿ ಬೋಧ ಭಾಷೆ ಇಂಗ್ಲೀಷ ಆಗಿರುತ್ತದೆ. ಅದನ್ನು ಕನ್ನಡದಲ್ಲಿಯೇ ಮಾಡಬೇಕೆಂದು ಕಡ್ಡಾಯಗೊಳಿಸಲು ಸಾಧ್ಯವಾಗಲಾರದು. ಯಾಕೆಂದರೆ ಭಾರತದ ಸರ್ವೋಚ್ಚ ನ್ಯಾಯಾಲಯವು ಗುಜರಾತ ವಿಶ್ವವಿದ್ಯಾಲಯ - ಎ.ಕೆ.ಆರ್. ಮುಧೋಳಕರ ಈ ವ್ಯಾಜ್ಯದ ತೀರ್ಪಿನಲ್ಲಿ, ಪ್ರಾದೇಶಿಕ ಭಾಷೆಯನ್ನೊಂದನ್ನೇ ಬೋಧ ಭಾಷೆಯ ಮಾಧ್ಯಮವನ್ನಾಗಿ ಕಡ್ಡಾಯಗೊಳಿಸುವದು ರಾಜ್ಯದ ಶಾಸನ ಸಭೆಯ ಅಧಿಕಾರದ ವ್ಯಾಪ್ತಿಯಲ್ಲಿ ಬರುವದಿಲ್ಲವೆಂದು ಸ್ಪಷ್ಟಗೊಳಿಸಿದೆ. (Imposition of a regional language as a compulsory medium of instruction is beyond the power of the state legislature.)

ಅಲ್ಲದೆ ಈ ದೇಶದ ಶ್ರೇಷ್ಠ ಕಾಯಿದೆ ತಜ್ಞರಾದ ಶ್ರೀ ಸೇರವಾಯಿಯವರು ತಮ್ಮ ಭಾರತ ಸಂವಿಧಾನದ ಹೆಚ್ಚೊತ್ತಿಗೆಯಲ್ಲಿ ಆಂಗ್ಲ ಭಾಷೆಯ ಜಾಗೆಯಲ್ಲಿ, ಪ್ರಾದೇಶಿಕ ಭಾಷೆಯೊಂದನ್ನೇ ಶಿಕ್ಷಣದ ಬೋಧಭಾಷೆಯಾಗಿ ಮಾಡುವ ಕೃತಿ ಸಂವಿಧಾನದ ವಿಧಿಗಳಿಗೆ ವಿರೋಧವಾಗುತ್ತದೆಂದು ಅಭಿಪ್ರಾಯಪಡುತ್ತಾರೆ.

ಐತಿಹಾಸಿಕ ಕಾರಣಗಳಿಂದ ಹಾಗೂ ಸಂವಿಧಾನ ದತ್ತವಾದ ಅಧಿನಿಯಮಗಳಿಂದ ಪ್ರಾದೇಶಿಕ ಭಾಷೆಯೊಂದನ್ನೇ ಬೋಧ ಭಾಷೆಯಾಗಿ ಅಳವಡಿಸಲು ಕಾಯಿದೆಯ ತೊಡರಿರುವದು ಸ್ಪಷ್ಟವಿದೆ. ಅದರಂತೆ ಶ್ರೀ ಕೃಷ್ಣ ವಿರುದ್ಧ ಗುಜರಾತ ವಿಶ್ವವಿದ್ಯಾಲಯ ಈ ತೀರ್ಪಿನಲ್ಲಿ ಗುಜರಾತ ಉಚ್ಚನ್ಯಾಯಾಲಯದ ಪೂರ್ಣಪೀಠವು, ರಾಜ್ಯಸರಕಾರವಾಗಲೀ ಅಥವಾ ಗುಜರಾತ ವಿಶ್ವವಿದ್ಯಾಲಯವಾಗಲೀ ಪ್ರಾದೇಶಿಕ ಭಾಷೆಯೊಂದನ್ನೇ ಬೋಧಕ ಭಾಷೆಯನ್ನಾಗಿ ಮಾಡುವ ಕ್ರಮ ಸಂವಿಧಾನದ ೨೯(೧) ಹಾಗೂ ೩೦ನೇ ವಿಧಿಗೆ ವಿರೋಧವಾಗುತ್ತದೆಂದೆ ತೀರ್ಪಿತ್ತಿದ್ದಾರೆ. ಅಲ್ಲದೆ ತಮ್ಮ ಈ ತೀರ್ಪಿಗೆ ಆಧಾರವಾಗಿ, ಭಾರತ ಸರ್ವೋಚ್ಚನ್ಯಾಯಾಲಯದ ತೀರ್ಪುಗಳನ್ನು ಆಧರಿಸಿದ್ದಾರೆ.

ವಿಶ್ವವಿದ್ಯಾಲಯ ಧನ ಸಹಾಯ ಆಯೋಗವೇನೋ ಪ್ರಾದೇಶಿಕ ಭಾಷೆಯನ್ನು ಬೋಧ ಭಾಷೆಯಾಗಿ ಮಾಡಲು ಶಿಫಾರಸು ಮಾಡಿದೆ. ಆದರೆ, ಕೇಂದ್ರ ಶಿಕ್ಷಣ ಇಲಾಖೆಯ ತ್ರಿವಳಿ ಭಾಷಾ ಸೂತ್ರ ಈ ಸಿಫಾರಿಸಿಗೆ ವ್ಯತಿರಿಕ್ತವಾಗಿದೆ. ಅಲ್ಲದೆ ಅಧಿಕೃತ ಭಾಷಾ ಕಾಯಿದೆ (Official Language Act) ದ ಮೂರನೇ ವಿಧಿ ಆಂಗ್ಲ ಭಾಷೆಯನ್ನು ಕೇಂದ್ರ ಹಾಗೂ ಸಂಸತ್ತಿನ ಭಾಷೆಯಾಗಿ ಮುಂದುವರೆಯಲು ಅವಕಾಶ ಕಲ್ಪಿಸಿದೆ.

ದಯಾಭಾಯಿ ವಿರುದ್ಧ ನದಿಮಲಾಲ ಈ ಮೊಕದ್ದಮೆಯಲ್ಲಿ ಸಂವಿಧಾನದ ೩೪೫ನೇ ವಿಧಿಯ ಉಪನಿಯಮದನ್ವಯ ಒಂದುವೇಳೆ, ರಾಜ್ಯ ಸರಕಾರವು ಪ್ರಾದೇಶಿಕ ಭಾಷೆಯನ್ನಾಗಲೀ ಅಥವಾ ಹಿಂದಿಯನ್ನಾಗಲೀ ತನ್ನ ಭಾಷೆಯೆಂದು ಅಳವಡಿಸಿಕೊಂಡರೂ, ನಿರ್ದಿಷ್ಟವಾಗಿ ಆಂಗ್ಲಭಾಷೆಯ ಉಪಯೋಗವನ್ನು ಸ್ಪಷ್ಟವಾಗಿ ಹೊರತು ಪಡಿಸದ ಹೊರತು ಆಂಗ್ಲಭಾಷೆ ಮುಂದುವರೆಯುತ್ತದೆಯೆಂದು ತೀರ್ಪಿತ್ತಿದ್ದಾರೆ. ಸಂವಿಧಾನದ ವಿಧಿ ೩೪೮ ಮತ್ತು ೩೪೯ರನ್ವಯ ರಾಜ್ಯದ ಉಚ್ಚನ್ಯಾಯಾಲಯದ ಹಾಗೂ ಸರ್ವೋಚ್ಚ ನ್ಯಾಯಾಲಯದ ಅಧಿಕೃತ ಭಾಷೆ ಇಂಗ್ಲೀಷಾಗಿರುತ್ತದೆ. ರಾಜ್ಯ ಸರಕಾರವು ಉಚ್ಚ ನ್ಯಾಯಾಲಯದ ಭಾಷಾ ನೀತಿಯನ್ನು ನಿರೂಪಿಸಲು ಕಾಯಿದೆಯಿಂದ ಅಸಮರ್ಥವಾಗಿದೆ. ಇದಲ್ಲದೆ ಉಚ್ಚನ್ಯಾಯಾಲಯದ ಸುಮಾರು ೧/೩ ನ್ಯಾಯಾಧೀಶರು ಪರ ಪ್ರಾಂತಗಳಿಂದ ಬರುವದರಿಂದ ಪ್ರಾದೇಶಿಕ ಭಾಷೆಯನ್ನು ಉಚ್ಚನ್ಯಾಯಾಲಯದ ಕಾರ್ಯಕಲಾಪಗಳಲ್ಲಿ ಅಳವಡಿಸಿಕೊಳ್ಳುವುದು ಕಾಯಿದೆಯ ಅಧಿಕಾರ ಕ್ಷೇತ್ರದ ಹೊರಗಿನ ಮಾತು ಅಷ್ಟೇ ಅಲ್ಲ ಅದು ಅವ್ಯವಹಾರಿಕವೂ ಆಗಬಹುದೆನಿಸುತ್ತದೆ.

ಮೂರನೆಯದಾಗಿ, ನ್ಯಾಯಾಲಯದ ತೀರ್ಪುಗಳಿಗೆ, ಈ ಹಿಂದೆ ಉಚ್ಚನ್ಯಾಯಾಲಯ ಹಾಗೂ ಸರ್ವೋಚ್ಚನ್ಯಾಯಾಲಯದಿಂದ ತೀರ್ಪಾದ ಮೊಕದ್ದಮೆಗಳು ಆಧಾರವಾಗಿರುವವರಿಂದ (Precedents) ಅಂಥ ತೀರ್ಪುಗಳು ಆಂಗ್ಲಭಾಷೆಯಲ್ಲಿರುವದರಿಂದ ಪ್ರಾದೇಶಿಕ ಭಾಷೆಯಲ್ಲಿ ತೀರ್ಪು ಕೊಡುವದು ಧೀಮಸಾಹಸವಾಗಬಹುದು.

ನಾಲ್ಕನೆಯದಾಗಿ, ತೀರ್ಪು ಬರೆಯಲು ಪ್ರಾದೇಶಿಕ ಭಾಷೆಯಲ್ಲಿ ಶೀಘ್ರಲಿಪಿಕಾರರು ದೊರೆಯುವದು ದುಸ್ತರ ಮತ್ತು ಶೀಘ್ರಲಿಪಿಕಾರರ ಸಹಾಯವಿಲ್ಲದೆ ಅತೀ ಬೃಹತ್‌ಆಗಿ ಬೆಳೆದಿರುವ ನ್ಯಾಯಾಲಯದ ಕಾರ್ಯಕಲಾಪಗಳನ್ನು ನಿಭಾಯಿಸುವದು ಕಠಿಣ.

ಮೇಲ್ನೋಟಕ್ಕೆ ಈ ಆಕ್ಷೇಪಗಳು ಬಹಳ ಗುರುತರವಾಗಿ ಕಾಣುವದೇನೋ ನಿಜ. ಆದರೆ ಎಲ್ಲಿ ಮನಸ್ಸಿದೆಯೋ ಅಲ್ಲಿ ಮಾರ್ಗವಿದ್ದೇ ಇದೆ. (Where there is a will, there is a way)

ನಮ್ಮ ರಾಜ್ಯದ ಉಚ್ಚನ್ಯಾಯಾಲಯದ ಮಟ್ಟಿಗೆ ಹೇಳುವದಾದರೆ, ಕನ್ನಡವನ್ನು ಉಚ್ಚನ್ಯಾಯಾಲಯದ ಅಧಿಕೃತ ಭಾಷೆಯನ್ನಾಗಿ ಮಾಡುವದು ರಾಜ್ಯ ಸರಕಾರದ ಅಧಿಕಾರ ವ್ಯಾಪ್ತಿಗೆ ಮೀರಿದ ಮಾತು. ಆದರೆ ಒಂದೆ ಹೇಳಿದಂತೆ ಉಚ್ಚನ್ಯಾಯಾಲಯವೇ ಮನಸ್ಸು ಮಾಡಿದರೆ ಅದೇನೂ ಅಸಾಧ್ಯ ಕೆಲಸವಾಗಲಾರದು.

ಇನ್ನು ಕನ್ನಡವನ್ನರಿಯದ ಪರಪ್ರಾಂತದಿಂದ ಬಂದ ನ್ಯಾಯಮೂರ್ತಿಗಳ ಭಾಷಾ ತೊಂದರೆಯನ್ನು ನೀಗಿಸಲು ಮಾರ್ಗಗಳಿವೆ. ನಮ್ಮ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಸನ್ಮಾನ್ಯ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಅಭಿಪ್ರಾಯಪಡುವಂತೆ ಅವರ ಮುಂದೆ ಕಳಿಸಲ್ಪಡುವ ಮೊಕದ್ದಮೆಗಳ ಕಾಗದ ಪತ್ರಗಳು ಆಂಗ್ಲ ಭಾಷೆಯಲ್ಲಿ ಭಾಷಾಂತರ

ಗೊಂಡರೆ, ಈ ತೊಂದರೆ ನಿವಾರಿಸುವದು ಸಾಧ್ಯವಿದೆಯೆಂಬುದು ಗಮನಾರ್ಹ. ಇದೇ ರೀತಿಯಾಗಿ ಧಾರವಾಡ ಜಿಲ್ಲೆಯ ಮುಖ್ಯ ನ್ಯಾಯಾಧಿಶರಾದ ಮಾನ್ಯ ಶ್ರೀ ಶ್ರೀಧರರಾಯರು ಈ ಕಠಿಣ ಕಾರ್ಯವನ್ನು ಸಮರ್ಥವಾಗಿ ಬಗೆಹರಿಸಲು ಸಾಧ್ಯವಿದೆಯೆಂದು ಅಭಿಪ್ರಾಯ ಪಡುತ್ತಾರೆ. ಅಧಿಕೃತ ಭಾಷಾಂತರಿಸುವ ಅವಶ್ಯಕತೆ ಹೆಚ್ಚಾಗಿದೆ. ಕಾರಣ, ಉಭಯ ಭಾಷಾ ಪ್ರವೀಣರ ದಂಡೇ ಈ ಭಾಷಾಂತರ ಕಾರ್ಯಕ್ಕೆ, ಕೊನೆಯ ಪಕ್ಷ, ಕಾಲು ಶತಮಾನ, ಕಾಲ ಕಾರ್ಯಪ್ರವೃತ್ತರಾಗುವದು ಇಂದು ಅತಿ ಅವಶ್ಯವಿದೆ. ಇನ್ನು ಸುಲಭದ ಮಾರ್ಗವೆಂದರೆ ಈ ವ್ಯಾಜ್ಯಗಳ ಉಭಯ ಪಕ್ಷದವರೂ ತಮ್ಮ ತಮ್ಮ ಪ್ರಾದೇಶಿಕ ಭಾಷೆಯ ಕಾಗದ ಪತ್ರಗಳ ಆಂಗ್ಲ ಭಾಷಾ ಪ್ರತಿಯನ್ನು ಪೂರೈಸಿದರೆ ಆ ಕಾರ್ಯ ಇನ್ನೂ ಸುಲಭವಾಗಲು ಸಾಧ್ಯವಿದೆ. ಆದರೆ ಆ ಪಕ್ಷದವರು ಇಂಥ ಭಾಷಾಂತರವನ್ನು ಸರಿಯಾಗಿ ಮಾಡುತ್ತಾರೆಂಬ ಭರವಸೆ ಏನು? ಎಂಬ ಪ್ರಶ್ನೆ ಏಳಬಹುದು. ಯಾವಾಗಲೂ ಒಂದು ಪಕ್ಷದವರ ಕಾರ್ಯವನ್ನು ಎದುರು ಪಕ್ಷದವರು ಪರಿಶೀಲಿಸುವದರಿಂದ ಅಂಥ ತಪ್ಪುಗಳಾಗುವದು ಕಡಿಮೆ. ಒಂದು ವೇಳೆ ಭಾಷಾಂತರದ ಬಗೆಗೆ ಏನಾದರೂ ಆಕ್ಷೇಪ ಬಂದಲ್ಲಿ ಅದನ್ನು ಆಧಿಕೃತ ಭಾಷಾಂತರಕಾರರ ಅಭಿಪ್ರಾಯಕ್ಕೆ ಕಳುಹಿಸಲು ಸಾಧ್ಯವಿದೆ.

ಇನ್ನು ಇಷ್ಟೆಲ್ಲ ಮಾಡಲು ಹಣವೆಲ್ಲಿ, ಎಂಬ ಪ್ರಶ್ನೆ ಉದ್ಭವಾಗುವದು ಸಹಜ. ಸರಕಾರದ ಇಂದಿನ ಎಷ್ಟೋ ನಿಷ್ಪ್ರಯೋಜಕ ಯೋಜನೆಗಳ ಖರ್ಚನ್ನು ನೋಡಿದರೆ ಈ ಭಾಷಾಂತರ ಇಲಾಖೆಯ ವೆಚ್ಚ ಅತಿ ಗೌಣವೆಂದು ಹೇಳಬೇಕು! ಮೂಲ ತೊಂದರೆಯಿರುವದು ಉಚ್ಚನ್ಯಾಯಾಲಯದ ಕಾರ್ಯಕಲಾಪಗಳನ್ನು ಕನ್ನಡದಲ್ಲಿ ನಡೆಸುವದು ಹಾಗೂ ತೀರ್ಪುಗಳನ್ನು

ಕನ್ನಡದಲ್ಲಿ ಕೊಡುವದು. ಮೇಲೆ ಹೇಳಿದಂತೆ ಮೂರರಲ್ಲಿ ಒಂದು ಭಾಗದಷ್ಟು ಕನ್ನಡಬಾರದ ನ್ಯಾಯಾಧೀಶರು ಇರುವಾಗ ಕನ್ನಡದಲ್ಲಿ ಕಾರ್ಯಕಲಾಪ ನಡಿಸುವದು ಹೇಗೆ? ಅವರು ಕನ್ನಡದಲ್ಲಿ ತೀರ್ಪು ಕೊಡಲು ಹೇಗೆ ಸಾಧ್ಯ? ಇದು ಹೋಗಲಿ. ಕನ್ನಡಬಲ್ಲ ನ್ಯಾಯಮೂರ್ತಿಗಳಾದರೂ ಕನ್ನಡದಲ್ಲಿ ತೀರ್ಪು ಕೊಡಲು ಸಾಧ್ಯವಾದೀತೇ. ಎಂಬ ಶಂಕೆ ಸಹಜವಾಗಿ ತಲೆದೋರುವದು. ಏನೋ ಸಣ್ಣ ಪುಟ್ಟ ವ್ಯಾಜ್ಯಗಳಾದರೆ ಆಮಾತು ಬೇರೆ. ಮಹತ್ವದ ಮುದ್ದೆಗಳನ್ನೊಳಗೊಂಡ ಸುದೀರ್ಘ ಚರ್ಚೆಗೆ ಅವಕಾಶವಿರುವ ಕ್ಲಿಷ್ಟಕರವಾದ ಮೊಕದ್ದಮೆಗಳ ತೀರ್ಪು ಕನ್ನಡದಲ್ಲಿ ಉಚ್ಚನ್ಯಾಯಾಲಯದಲ್ಲಿ ಕೊಡಲು ಸಾಧ್ಯವಾದೀತೇ? ಸದ್ಯದ ಪರಿಸ್ಥಿತಿಯಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ಇದು ಸಾಧ್ಯವಾಗುವದು ಕಠಿಣ. ಕಾರಣವಿಷ್ಟೆ, ಇಂದಿನ ನ್ಯಾಯಮೂರ್ತಿಗಳ ಕಾಯ್ದೆ ಅಭ್ಯಾಸ ಆಂಗ್ಲಮಾಧ್ಯಮದಲ್ಲಾಗಿದೆ. ಅವರು ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸಿದ್ದೂ ಆಂಗ್ಲ ಭಾಷೆಯಲ್ಲಿ, ಅಲ್ಲದೆ ಪ್ರಾದೇಶಿಕ ಭಾಷೆಯಲ್ಲಿ ಆಂಗ್ಲಭಾಷೆಯ ಕಾನೂನು ಪದಕೋಶಕ್ಕೆ ಸರಿಯಾದ ಪದಗಳ ಅಭಾವವಿದೆ. ಕರ್ನಾಟಕ ಸರಕಾರವೇನೋ ಅಂಥ ಪದಕೋಶವನ್ನು ತಂದಿದೆ. ಆದರೆ ಕೆಲ ಪದಗಳು ಆಂಗ್ಲ ಭಾಷೆಯ ಪದಗಳಿಗಿಂತ ಕಠಿಣವಾಗಿವೆ. ಅಷ್ಟೇ ಅಲ್ಲ, ಜನಸಾಮಾನ್ಯರಿಗೂ ತಿಳಿಯದಂತಿವೆ. ಉದಾಹರಣೆಗೆ, ಸಾಮನ್ಯರಿಗೂ ತಿಳಿಯುವ ಪೋಲೀಸ ಠಾಣೆಗೆ ಆರಕ್ಷಕ ಠಾಣೆ, ಆರಕ್ಷಕ ಮಹಾನಿರೀಕ್ಷಕ, ಅಭಿಯೋಜಕ ಅಭಿಯಂತರ, ಇಂಥ ಬಳಕೆಯಲ್ಲಿಲ್ಲದ ಪದ ಪ್ರಯೋಗ, ನೀರಿಳಿಯದ ಗಂಟಲಲ್ಲಿ ಕಡಬನ್ನು ತುರುಕುವ ವ್ಯರ್ಥಸಾಹಸವಾಗಿದೆ ಎನ್ನಬಹುದು.

ಯೋಗ್ಯ ಕನ್ನಡ ಶಬ್ದಗಳ ಅಭಾವಕ್ಕಿಂತ ಶೀಘ್ರ ಲಿಪಿಕಾರರ ಸಹಾಯವಿಲ್ಲದೆ ಕನ್ನಡದಲ್ಲಿ ತೀರ್ಪುಕೊಡುವದು ಕಠಿಣ ಕೆಲಸವೇನೊ ನಿಜ. ಆದರೆ ಕನ್ನಡವನ್ನು ಶೀಘ್ರಲಿಪಿಗೆ ಬಳಸುವದು ಅಸಾಧ್ಯಕೆಲಸವೇನೂ ಅಲ್ಲ. ಈ ಹಿಂದೆ ಕನ್ನಡದಲ್ಲಿ ಬೆರಳಚ್ಚು ಬರಹಗಳೂ ಇದ್ದಿರಲಿಲ್ಲ. ಆದರೆ ಇಂದು ಅಂಥ ಸಲಕರಣೆ ಒದಗಿದೆ. ಆಂಗ್ಲ ಬೆರಳಚ್ಚಿಗಿಂತ ಶೀಘ್ರವಾಗಿ, ಸುಂದರವಾಗಿ ಕನ್ನಡದಲ್ಲಿ ಟೈಪಮಾಡುವದು ಸಾಧ್ಯವಿದೆ. ಕಾರಣ ಸದ್ಯದಲ್ಲಿ ಕನ್ನಡದಲ್ಲಿ ತೀರ್ಪು ನೀಡುವದು ಸಾಧ್ಯವಾಗದಿದ್ದರೂ ಬರುವ ವರ್ಷಗಳಲ್ಲಿ ನಮ್ಮ ನ್ಯಾಯಮೂರ್ತಿಗಳು ಮನಸ್ಸು ಮಾಡಿದರೆ ಇದು ಅಸಾಧ್ಯವೇನೂ ಆಗಲಾರದು.

ಕರ್ನಾಟಕದ ಮಟ್ಟಿಗೇನೋ ಕನ್ನಡದಲ್ಲಿ ತೀರ್ಪುಸರಿಯಾದೀತು. ಕರ್ನಾಟಕದಲ್ಲಿಯೇ ಮೂರರಲ್ಲಿ ಒಂದು ಭಾಗ ಕನ್ನಡ ತಿಳಿಯದವರಿದ್ದಾರಲ್ಲ ಅವರ ಬಗ್ಗೆ ಏನು? ಇದಕ್ಕೆ ಉತ್ತರ ಇಷ್ಟೇ ಕರ್ನಾಟಕದಲ್ಲಿ ವಾಸವಾಗಿರುವವರು ವ್ಯವಹಾರದ ಮಟ್ಟಿಗಾದರೂ ಕನ್ನಡ ತಿಳಿದಿರುವದು ಅವಶ್ಯವಿದೆ. ಈ ದೃಷ್ಟಿಯಿಂದಲೇ ಇಂದು ಕನ್ನಡೇತರ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯ ಭಾಷೆಯಾಗಿ ಮಾಡಲಾಗುತ್ತಿದೆ ಮತ್ತು ಹಾಗೆ ಮಾಡಲಿಕ್ಕೆ ಸರಕಾರ ಅಧಿಕಾರ ಹೊಂದಿದೆಯೆಂದು ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ನೀಡಿರುವ ತೀರ್ಪು ಸಹಕಾರಿಯಾಗಿದೆ.

ಇನ್ನು, ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪುಗಳ ವಿರುದ್ಧ, ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬೇಕಾದರೆ ಕನ್ನಡ ಕಾರ್ಯಕಲಾಪಗಳ ಗತಿ ಏನು? ಈ ಉತ್ತರವಿಷ್ಟೇ. ಎಲ್ಲ ಕಡತಗಳ ಆಂಗ್ಲಭಾಷಾಂತರವನ್ನು ಒದಗಿಸುವದು. ಇದು ವ್ಯವಹಾರಿಕವೇ?

ಒಂದು ಮಾತು. ಇಂಥ ಮೇಲ್ಮನವಿಗಳ ಪ್ರಮಾಣವೆಷ್ಟು? ಸರ್ವೋಚ್ಚ ನ್ಯಾಯಾಲಕ್ಕೆ ಮೇಲ್ಮನವಿಯನ್ನು ಸಲ್ಲಿಸಲು ತಗಲುವ ವೆಚ್ಚವನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಈ ಭಾಷಾಂತರ ಕಾರ್ಯಕ್ಕೆ ತಗಲುವ ವೆಚ್ಚ ಅತಿ ಕಡಿಮೆ.

ಇಲ್ಲಿ ಒಂದು ವಿಷಯ ಗಮನಾರ್ಹ. ಹಳೆಯ ಹೈದರಾಬಾದ ಪ್ರಾಂತದಲ್ಲಿ ಕಾನೂನು ಶಿಕ್ಷಣ, ಕಾನೂನು ಪುಸ್ತಕಗಳು, ನ್ಯಾಯಾಲಯದ ತೀರ್ಪುಗಳು ಸಂಪೂರ್ಣ ಉರ್ದುವಿನಲ್ಲಿ ಬರಲು ಸಾಧ್ಯವಾದಾಗ ಕನ್ನಡದಂತಹ ಶ್ರೀಮಂತ ಭಾಷೆಯಲ್ಲಿ ಇದು ಸಾಧ್ಯವಾಗಬಹುದೆಂದು ಯಾರಾದರೂ ಹೇಳಿದರೆ ಅದನ್ನು ನಂಬುವದು ಕಠಿಣ.

ಇದರ ಪ್ರಾರಂಭ ಎಲ್ಲಿಂದ? ಕಾನೂನು ಶಿಕ್ಷಣ ಕನ್ನಡ ಮಾಧ್ಯಮದಿಂದಲೇ ಆಗುವದರಿಂದ ಇದರ ಪ್ರಾರಂಭವಾಗಬೇಕು. ಇದಕ್ಕಾಗಿ ಮೊದಲಿಗೆ ಕನ್ನಡದಲ್ಲಿ ಕಾನೂನು ವಿಷಯಗಳ ಮೇಲೆ ಪಠ್ಯಪುಸ್ತಕಗಳ ರಚನೆಯಾಗಬೇಕು. ಈಗಾಗಲೇ ಎಷ್ಟೋ ಕಾನೂನು ಪುಸ್ತಕಗಳು ಕನ್ನಡದಲ್ಲಿ ಭಾಷಾಂತರವಾಗಿ ಲಭ್ಯವಾಗಿವೆ. ಆದರೆ ವಿಶ್ವವಿದ್ಯಾಲಯದ ಪಠ್ಯಕ್ರಮಕ್ಕೆ ಅನುಗುಣವಾಗಿ, ಕಾನೂನು ಪಠ್ಯ ಪುಸ್ತಕಗಳ ರಚನೆಗೆ ನುರಿತ ಪರಿಣಿತರನ್ನು ದೊರಕಿಸುವದು ಸುಲಭದ ಮಾತೇನು ಅಲ್ಲ. ಆದರೆ ಅಸಾಧ್ಯವೂ ಅಲ್ಲ. ಹೆಚ್ಚು ವೇಳೆ ಹಿಡಿಯಬಹುದು ಅಷ್ಟೇ. ಇನ್ನು ಕಾನೂನು ಪದಗಳ ವಿಷಯವಾಗಿ ಸಾಧ್ಯವಾದಷ್ಟು ಬೇಗ ಭಾಷಾ ಮೈಲಿಗೆಯನ್ನು ವರ್ಜಿಸಿ ನಾವು ಪ್ರಗತಿಶೀಲರಾಗಬೇಕಾಗಿದೆ. ಕನ್ನಡದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಯಾವುದೇ ಭಾಷೆಯ ಪದಗಳನ್ನು ಧಾರಾಳವಾಗಿ ಪತ್ತೆ ಹಚ್ಚಿ ತೆಗೆದುಕೊಂಡು ಅದನ್ನು ಕನ್ನಡೀಕರಿಸಬೇಕು. ಉದಾ : ಕೋರ್ಟಡಿಕ್ರಿ, ಪೋಲೀಸ್ ವಾರಂಟು, ಸಮನ್ಸು, ಬಸ್ಸು, ರೇಲ್ವೆ, ತಾರೇವಿ, ಮನಾಯಿ, ಇತ್ಯಾದಿ. ಇಂಥ ಬಳಕೆಯಿಂದ ಭಾಷೆಯೂ ಶ್ರೀಮಂತವಾಗುತ್ತದೆ. ಕರ್ನಾಟಕದ ಎಲ್ಲಡೆ ಉಪಯೋಗಿಸುವ ಪದಗಳನ್ನು ಆರಿಸಿ ಪರ್ಯಾಯಶಬ್ದಗಳನ್ನಾಗಿಸಿ ಕನ್ನಡೀಕರಿಸುವದು ಅವಶ್ಯವಿದೆ.

ಕನ್ನಡ ಭಾಷೆಯಲ್ಲಿ ಕಾನೂನು ವಿದ್ಯಾರ್ಥಿಗಳು ಉತ್ತರವನ್ನೇನೋ ಬರೆಯುತ್ತಿದ್ದಾರೆ. ನನ್ನ ಮೂವತ್ತು ವರುಷಗಳ ಅನುಭವದಲ್ಲಿ ಸಮರ್ಥವಾಗಿ ಉತ್ತರಿಸುವ ಸಾಮರ್ಥ್ಯ ಹತ್ತು ವಿದ್ಯಾರ್ಥಿಗಳಲ್ಲಿ ಒಬ್ಬನಿಗೆ ಮಾತ್ರ ಇರುವದು ಕಂಡು ಬರುತ್ತದೆ. ಕಾರಣವಿಷ್ಟೇ ಕಾನೂನ ಮಹಾವಿದ್ಯಾಲಯದಲ್ಲಿ ಬೋಧ ಭಾಷೆ ಕನ್ನಡವಲ್ಲ. ಹೇಳುವವರು ಆಗಷ್ಟು ಈಗಷ್ಟು ಹರಕು ಮುರುಕು ಕನ್ನಡದಲ್ಲಿ ಹೇಳುತ್ತಾರೆ. ಹೀಗಾಗಿ ಅವರ ಬರವಣಿಗೆ ಅತ್ತ ಕನ್ನಡವೂ ಅಲ್ಲ ಇತ್ತ ಇಂಗ್ಲೀಷೂ ಅಲ್ಲ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ತೊಳಲುತ್ತಿದ್ದಾರೆ. ಕನ್ನಡದಲ್ಲಿ ಬರೆದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುವ ಮೌಲ್ಯಮಾಪಕರ ಕನ್ನಡ ಭಾಷಾ ಪ್ರವೀಣತೆಯ ಅಭಾವ ಇಂಥ ವಿದ್ಯಾರ್ಥಿಗಳಿಗೆ ಮಾರಕವಾಗಿ ಪರಿಣಮಿಸುತ್ತದೆ. ಕನ್ನಡವೇ ಸರಿಯಾಗಿ ಬಾರದ ಪರೀಕ್ಷಕರು ಮೌಲ್ಯಮಾಪಕರಾದರೆ ಆ ವಿದ್ಯಾರ್ಥಿಗಳನ್ನು ದೇವರೇ ಕಾಯಬೇಕು. ಹೀಗಾಗಿ ಈಗ ಏನಾಗಿದೆಯೆಂದರೆ ನಮ್ಮ ಕಾನೂನ ವಿದ್ಯಾರ್ಥಿಗಳಿಗೆ. ಇಂದು ಇಂಗ್ಲೀಷ ಸರಿಯಾಗಿ ಅರ್ಥವಾಗುತ್ತಿಲ್ಲ. ಕನ್ನಡದಲ್ಲಿ ಸರಿಯಾಗಿ ಅಭ್ಯಸಿಸಲು ಪಠ್ಯಪುಸ್ತಗಳ ಅಭಾವ. ಅಲ್ಲೊಂದು ಇಲ್ಲೊಂದು ಲಭ್ಯವಿರುವ ಕನ್ನಡದಲ್ಲಿರುವ ಕನ್ನಡ ಗೈಡುಗಳ

ಮರೆಹೊಕ್ಕ ವಿದ್ಯಾರ್ಥಿಗಳ ಮಟ್ಟಿ, ದೇವರಿಗೇ ಪ್ರೀತಿ ಅತ್ತ ಕನ್ನಡವೂ ಅಲ್ಲ ಇತ್ತ ಇಂಗ್ಲೀಷೂ ಅಲ್ಲ. ಹೀಗಾಗಿ ನಮ್ಮ ಯುವ ಕಾನೂನು ವಿದ್ಯಾರ್ಥಿಗಳು ಯುವ ನ್ಯಾಯವಾದಿಗಳೂ ಒಂದು ರೀತಿಯ ಅಭದ್ರತೆಯಲ್ಲಿ ತೊಳಲುತ್ತಿದ್ದಾರೆ. ಇವರೇ ಐದು ವರುಷಗಳ ನಂತರ ನ್ಯಾಯಾಂಗ ಇಲಾಖೆಯನ್ನು ಪ್ರವೇಶಿಸುತ್ತಾರೆ. ಈಗಿನ ಈ ವಿಷಮ ಪರಿಸ್ಥಿತಿಯನ್ನು ನೆನೆದರೆ ಖೇದವೆನಿಸುತ್ತದೆ. ಇದಕ್ಕೆ ಪರಿಹಾರವೇನು? ನನ್ನ ಅಭಿಪ್ರಾಯದಲ್ಲಿ :

೧. ಈ ಹಿಂದೆ ಇದ್ದಂತೆ ಪ್ರಾದೇಶಿಕ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ೧ ರಿಂದ ೭ನೇ ವರ್ಗದವರೆಗೆ ಇರಬೇಕು

೨. ನಂತರ ಇಂಗ್ಲೀಷ ಭಾಷಾಜ್ಞಾನ ಐಚ್ಛಿಕವಾಗಿಡುವದಕ್ಕಿಂತ ಕಡ್ಡಾಯಗೊಳಿಸಬೇಕು.

೩. ಈ ಹಿಂದೆ ಮ್ಯಾಟ್ರಿಕ್ಯುಲೇಶನ್ ಅಂದರೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಬರುವವರೆಗೆ ಪ್ರಾದೇಶಿಕ ಭಾಷೆಯೊಡನೆ. ಆಂಗ್ಲ ಭಾಷೆಯಲ್ಲಿ ಸಾಕಷ್ಟು ಪರಿಣತಿ ಪಡೆಯುವದು ಸಾಧ್ಯವಿತ್ತು. ಸದ್ಯದ ಪರಿಸ್ಥಿತಿಯಲ್ಲಿ ಹಿಂದಿ, ಭಾರತದ ಸಂಪರ್ಕ ಭಾಷೆಯಾಗಲು ಇನ್ನೂ ಬಹುದೂರಸಾಗಬೇಕು. ಆದರೆ ಇಂಗ್ಲೀಷ ಅಂಥ ಸಂಪರ್ಕ ಭಾಷೆಯ ಹಿರಿಮೆಯನ್ನು ಗಳಿಸಿಕೊಂಡಿದೆ. ಇಂಗ್ಲೀಷದಲ್ಲಿ ಪ್ರಾವೀಣ್ಯತೆ ಪಡೆದ ವ್ಯಕ್ತಿ ಇಂದು ಭಾರತದ ಯಾವುದೆ ಮೂಲೆಯಲ್ಲಿ ಅಷ್ಟೇ ಅಲ್ಲ ಜಗತ್ತಿನ ಯಾವುದೇ ಭಾಗದಲ್ಲಿ ವ್ಯವಹಾರ ಮಾಡಬಹುದು. ಕಾರಣ ಪ್ರಾದೇಶಿಕ ಭಾಷೆಯೊಡನೆ ಆಂಗ್ಲ ಭಾಷೆಯ ಜ್ಞಾನಕ್ಕೆ ಒತ್ತುಕೊಡುವದು ಅಪೇಕ್ಷಣೀಯ.

೪. ಕಾನೂನು ಕಾಲೇಜುಗಳಲ್ಲಿ ಕನ್ನಡದಲ್ಲಿ ಕಾನೂನು ಕಲಿಸಬಲ್ಲ ಸಮರ್ಥರ ನೇಮಕ.

೫. ಕಾನೂನು ಅಭ್ಯಾಸವನ್ನು ಕನ್ನಡದಲ್ಲಿ ಮಾಡುವದನ್ನು ಕಡ್ಡಾಯಗೊಳಿಸುವಿಕೆ.

೬. ಆಂಗ್ಲಭಾಷಾ ಪ್ರಾವೀಣ್ಯತೆಯನ್ನು ಪಡೆಯಲು ಆಂಗ್ಲಭಾಷಾ ಜ್ಞಾನದ ಬಗೆಗೆ ಒಂದು ವಿಷಯ ಕಡ್ಡಾಯವಾಗಿ ಮಾಡುವದು.

೭. ಕಿರಿಯ ವಕೀಲರಿಗೆ ಕಾಯಿದೆ ಜ್ಞಾನ ಮುಂದುವರಿಕೆಗಾಗಿ ತರಬೇತಿ ಕೇಂದ್ರಗಳನ್ನು ತೆರೆಯುವದು.

೮. ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಕನ್ನಡದಲ್ಲಿ ಪಠ್ಯಪುಸ್ತಕ ರಚಿಸಲು ಕ್ರಮ ಕೈಕೊಳ್ಳುವದು.

೯. ಕನ್ನಡದಲ್ಲಿ ವಾದ ಮಂಡಿಸಲು ಪ್ರೋತ್ಸಾಹಿಸುವದು.

೧೦. ಉಭಯ ಭಾಷಾ ವಿಶಾರದರನ್ನೇ ನ್ಯಾಯಾಂಗ ಸೇವೆಗೆ ಸೇರ್ಪಡೆ ಮಾಡಿಕೊಳ್ಳುವದು.

[ಇಂದು ನ್ಯಾಯಾಂಗ ಸೇವೆಗೆ ಸೇರುವವರಿಗೆ ಒಂದು ಭಾಷಾಂತರ ಪೇಪರ ಇರುತ್ತದೆ. ಆದರೆ ಅಷ್ಟರಿಂದಲೇ ಅವರ ಪರಿಣಿತಿಯನ್ನು ಅಳೆಯಲು ಸಾಧ್ಯವಾಗಲಾರದು.]

೧೧. ನ್ಯಾಯಾಂಗ ಇಲಾಖೆಗೆ ಸೇರಿದವರಿಗೆ, ಒಂದು ವರುಷ ಕಡ್ಡಾಯ ತರಬೇತಿ, ಈಗಿರುವಂತೆ ಹದಿನೈದು ದಿನ ತರಬೇತಿ ಸಾಲದು. ತರಬೇತಿಯ ನಂತರ ಅದರ ಸೂಕ್ತ ಮೌಲ್ಯಮಾಪನ ಅವಶ್ಯ.

ನನ್ನ ದೃಷ್ಟಿಯಲ್ಲಿ ಇವೆಲ್ಲ ಕ್ರಮಗಳಿಗಿಂತ ಕನ್ನಡ ಅನುಷ್ಠಾನಗೊಳಿಸಲು ಮಾನಸಿಕ ಸಿದ್ಧತೆ ಅವಶ್ಯ. ಕನ್ನಡದಲ್ಲಿ ಕಾನೂನು ಅನುಷ್ಠಾನ ಸಾಧ್ಯವೆಂಬ ಮನೋವೃತ್ತಿ ಅತಿ ಅವಶ್ಯ. ಕೇವಲ ಕನ್ನಡ ಪಂಡಿತ ಎಂಬ ತಾತ್ಸಾರ ಮನೋಭಾವವನ್ನು ಬೇಗ ತ್ಯಜಿಸಿದಷ್ಟು ಒಳ್ಳೆಯದು. ಅಲ್ಲದೆ ಕನ್ನಡ ಒಂದು ಸತ್ವವುಳ್ಳ ಭಾಷೆ. ಎಂಥ ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳನ್ನು ಕೂಡ ಕನ್ನಡದಲ್ಲಿ ಕಲಿಯಬಹುದು. ಮತ್ತು ಕಲಿಸಬಹುದು ಆತ್ಮ ವಿಶ್ವಾಸ ಮೂಡಿಬರಬೇಕು. ಇತ್ತಿತ್ತಲಾಗಿ ಪರಪ್ರಾಂತಗಳಿಂದ ಬಂದ ಐ.ಎ.ಎಸ್. ಶ್ರೇಣಿಯ ಅಧಿಕಾರಿಗಳು ವರ್ಷ ಎರಡು ವರ್ಷಗಳಲ್ಲಿ ಕನ್ನಡ ಕಲಿತು ಉತ್ತಮ ಕನ್ನಡದಲ್ಲಿ ಇಂದು ಭಾಷಣ ಕೂಡ ಮಾಡುತ್ತಿರುವದು ಸಾಧ್ಯವಾಗಿರುವಾಗ ಇಲ್ಲಿಯೇ ಹುಟ್ಟಿ, ಬೆಳೆದು ಕನ್ನಡದಲ್ಲಿಯೇ ಉಸಿರಾಡುತ್ತಿರುವ ನಮಗೆ ನ್ಯಾಯಾಲಯದಲ್ಲಿ ಕನ್ನಡ ಬಳಕೆಮಾಡಲು ಸಾಧ್ಯವಿಲ್ಲವೆಂದು ಹೇಳಿದರೆ ಅಂಥವರ ವಿಷಯವಾಗಿ ಮರುಕ ಪಡಬೇಕಷ್ಟೆ. ಈ ವಿಷಯದಲ್ಲಿ ಮಹಾತ್ಮಾ ಗಾಂಧಿಯವರು ಹೇಳಿದ ಮಾರ್ಮಿಕ ಮಾತು :

"ಅನ್ಯ ಭಾಷಾ ಮಾಧ್ಯಮ ನಮ್ಮ ರಾಷ್ಟ್ರದಶಕ್ತಿಯನ್ನು ಹೀರಿದೆ. ವಿದ್ಯಾರ್ಥಿಗಳ ವಯೋಮಾನವನ್ನು ಕಡಿಮೆ ಮಾಡಿದೆ. ಅವರನ್ನು ಜನವರ್ಗದಿಂದ ವಿಮುಖಗೊಳಿಸಿದೆ. ವಿದ್ಯಾಭ್ಯಾಸವನ್ನು ಅನಾವಶ್ಯಕವಾಗಿ ತುಟಾಗ್ರಗೊಳಿಸಿದೆ. ಈ ವಿಧಾನ ಇನ್ನೂ ಮುಂದುವರಿದರೆ ಇದು ರಾಷ್ಟ್ರದ ಸತ್ವವನ್ನೇ ಸೂರೆಗೊಳ್ಳುತ್ತದೆ. ಆದುದರಿಂದ ವಿದ್ಯಾವಂತರಾದ ಭಾರತೀಯರು ಎಷ್ಟು ಜಾಗ್ರತೆಯಾಗಿ ವಿದೇಶೀಯ ಭಾಷಾಮಾಧ್ಯಮದ ವ್ಯಾಮೋಹವನ್ನು ಬಿಡುವರೋ ಅವರಿಗೂ ಮತ್ತು ಜನತೆಗೂ ಅಷ್ಟು ಒಳ್ಳೆಯದೇ."

ಆದರೆ, ಆಂಗ್ಲ ಭಾಷಾ ಜ್ಞಾನ, ಪ್ರಾದೇಶಿಕ ಭಾಷಾ ಪರಿಣತಿಯೊಡಗೂಡಿದ್ದರೆ ಅದು ಆಂಗ್ಲಭಾಷಾ ವ್ಯಾಮೋಹವಾಗಲಾರದೆಂಬುದು ಸ್ಪಷ್ಟ. ಕನ್ನಡ ಭಾಷೆಯನ್ನು ಸಮಗ್ರವಾಗಿ ಶ್ರೀಮಂತಗೊಳಿಸುವಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯವು ಅಲ್ಪ ಅವಧಿಯಲ್ಲಿ ಸಾಕಷ್ಟು ಶ್ರಮಿಸಿರುವದು, ಬಹಳಷ್ಟು ಸಾಧಿಸಿರುವದು ಶ್ಲಾಘನೀಯ. ಸಮರ್ಥ ಕಾನೂನು ಪದಕೋಶವನ್ನು ಈ ವಿಶ್ವವಿದ್ಯಾನಿಲಯ ಕೊಡುವಲ್ಲಿ ಮುಂದಾದರೆ ನ್ಯಾಯಾಂಗದಲ್ಲಿ ಕನ್ನಡದ ಬಳಕೆಗೆ ಅದು ಅಪಾರ ಕೊಡುಗೆಯಾಗುವಲ್ಲಿ ಸಂದೇಹವಿಲ್ಲ. ಮಾತೆ ಭುವನೇಶ್ವರಿ ಅಂಥ ಶಕ್ತಿಯನ್ನು ಈ ವಿಶ್ವವಿದ್ಯಾಲಯಕ್ಕೆ ದಯಪಾಲಿಸಲೆಂದು ನನ್ನ ಪ್ರಾರ್ಥನೆ.

◆ ◆ ◆

ಮಂಟಪ ಮಾಲೆ

೨೮

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನ ಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟು ಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಕಡಿಮೆ ಬೆಲೆಯ ಕಿರು ಪುಸ್ತಿಕೆಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ. ಜೊತೆಗೆ ನಮ್ಮ ನಾಡಿನ ಖ್ಯಾತ ವಿದ್ವಾಂಸರನ್ನೂ ಮಂಟಪಮಾಲೆಯಲ್ಲಿ ಉಪನ್ಯಾಸ ನೀಡಲು ಆಹ್ವಾನಿಸುತ್ತೇವೆ. ಈ ಮಾಲೆಯಲ್ಲಿ ಪ್ರಸಿದ್ಧ ನ್ಯಾಯಾವಾದಿಗಳಾದ ಜಿ.ಎಮ್.ಪಾಟೀಲ ಅವರು ನೀಡಿದ ಉಪನ್ಯಾಸದ ಕಿರುಹೊತ್ತಿಗೆ ಇದು. ಈ ಕೃತಿಯನ್ನು ಮಂಟಪ ಮಾಲೆಯಲ್ಲಿ ಪ್ರಕಟಿಸಲು ನಮಗೆ ಸಂತೋಷವಾಗುತ್ತದೆ.

ಡಾ. ಚಂದ್ರಶೇಖರ ಕಂಬಾರ
ಕುಲಪತಿಯವರು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ